# ಅನಂತಪಥ

ಜುಲೈ - 2020

ಸಂಪುಟ- 1

ಸಂಚಿಕೆ - 1

ANANTHKUMAR PRATISHTHANA




# ಅನಂತಕುಮಾರ್ ಪ್ರತಿಷ್ಠಾನವು ಹೊಸ ಪೀಳಿಗೆಗೆ ನವ ಚೈತನ್ಯವನ್ನು ತುಂಬಲಿ

## ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪನವರ ಆಶಯ



ನನ್ನ ನೆಚ್ಚಿನ ಗೆಳೆಯ ಒಡನಾಡಿ ದಿವಂಗತ ಅನಂತಕುಮಾರ್ ಅವರ ೬೦ನೇ ಹುಟ್ಟು ಹಬ್ಬದ ಸಂದರ್ಭವಿದು. ಚೈತನ್ಯದ ಚಿಲುಮೆಯಂತಿದ್ದ ಅನಂತಕುಮಾರ್ 'ದೇಶಸೇವೆಯೇ ಈಶಸೇವೆ' ಎಂಬ ಮಾತಿನಂತೆ ಜನ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ವಿದ್ಯಾರ್ಥಿ ದೆಸೆಯಲ್ಲಿಯೇ ಅನಂತಕುಮಾರ್ ವಿದ್ಯಾರ್ಥಿ ಪರಿಷತ್ತಿನ ಬಹಳ ಉನ್ನತ ಸ್ಥಾನವನ್ನು ಪಡೆದು ರಾಜ್ಯದ ಪ್ರಧಾನ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದವರು. ಮುಂದೆ ಕೇಂದ್ರಸರ್ಕಾರದ ಬೇರೆ ಬೇರೆ ವಿಭಾಗದ ಸಚಿವರಾಗಿ ಈ ನಾಡಿಗೆ ಒಂದು ದೊಡ್ಡ ಕೊಡುಗೆಯನ್ನು ಕೊಟ್ಟಂಥ ಧೀಮಂತ ನಾಯಕ ನಮ್ಮ ಅನಂತಕುಮಾರ್. ರಾಜ್ಯದಲ್ಲಿ ಭಾರತೀಯ ಜನತಾ ಪಾರ್ಟಿಯನ್ನ ಕಟ್ಟುವುದಕ್ಕೆ ಅವರು ಕೊಟ್ಟಂಥ ಸಮಯ, ಮಾಡಿದಂಥ ಕೆಲಸದ ರೀತಿ ಅನನ್ಯ.

ಮಲ್ಲಿಕಾರ್ಜುನಯ್ಯನವರು ಉಪಸಭಾಪತಿಗಳಾಗಿದ್ದಾಗ ಅವರ ಮನೆಯಲ್ಲಿ ನಾನು, ಅನಂತಕುಮಾರ್, ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ನಾವೆಲ್ಲ ವರ್ಷಾನುಗಟ್ಟಲೆ ಇದ್ದೀವಿ. ಬೆಳಗ್ಗೆ ೭-೦೦ಗಂಟೆಗೆ ವಾಕ್ ಮಾಡುತ್ತ ಕಾರ್ಯಕ್ರಮವನ್ನ ರೂಪಿಸುತ್ತ ಹೊರಡುತ್ತಿದ್ದ ಅನಂತಕುಮಾರ್ ಬಹುಶ: ಅಂದು ನಮ್ಮನ್ನು ಯಾರೂ ಕೇಳದೆ ಇದ್ದ ಕಾಲದಲ್ಲಿ, ಪಕ್ಷ ಬೆಳೆಯದೆ ಇದ್ದ ಕಾಲದಲ್ಲಿ ರಾಜ್ಯದ ಉದ್ದಗಲಗಳಿಗೆ ಓಡಾಡಿ ಪಕ್ಷವನ್ನು ಕಟ್ಟಿದರು.

ಪುಟ - 2



## ನಾನು ಕಂಡಂತೆ ಅನಂತಕುಮಾರ್

ಮಾಲಿಕೆಯಲ್ಲಿ

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ **ಶ್ರೀ. ಜೆ.ಪಿ.** ನಡ್ಡಾ ಅವರ ಅನಿಸಿಕೆ

ಪುಟ – 1೦

ನನಗೆ ಹೆಜ್ಜೆಗೆ ಹೆಜ್ಜೆಯಾಗಿ ಸಹಕಾರವನ್ನು ಕೊಟ್ಟರು. ಯಾವುದೇ ರಾಷ್ಟ್ರೀಯ ನಾಯಕರು ಬಂದರೂ ಸಹ ನಾವು ಒಟ್ಟಿಗೆ ಇರುತ್ತಿದ್ದೆವು. ಪ್ರತಿಯೊಂದು ಸಭೆಗೂ ಮುಂಚಿತವಾಗಿ ನಾವು ಹಾಜರಿರುತ್ತಿದ್ದೆವು. ಅಟಲ್ ಬಿಹಾರಿವಾಜಪೇಯಿಯಿರಲಿ, ಅಡ್ವಾನಿಯವರು ಇರಲಿ ಅವರು ಮುಂದಿನ ಸಭೆಗೆ ಮಾತನ್ನಾಡುವುದಕ್ಕೆ ಬರುವ ಮುಂಚೆಯೇ ನಾನು ಆ ಸಭೆಗೆ ಹೋಗಬೇಕು. ಅವರು ನಂತರ ರಾಷ್ಟ್ರೀಯ ನಾಯಕರ ಜೊತೆಗೆ ಬರಬೇಕು. ಈ ರೀತಿ ವ್ಯವಸ್ಥಿತವಾಗಿ ಕೆಲಸಗಳನ್ನು ನಡೆಸುತ್ತಿದ್ದೆವು.

ಇವತ್ತು ಏನಾದರೂ ಮತ್ತೊಮ್ಮೆ ರಾಜ್ಯದಲ್ಲಿ ಭಾರತೀಯ ಜನತಾ ಪಾರ್ಟಿ ಸರ್ಕಾರ ಅಧಿಕಾರಕ್ಕೆ ಬಂದಿದೆ ಈ ಹಿಂದೆಯೂ ಆಡಳಿತ ನಡೆಸಿದೆ ಎನ್ನುವುದರ ಹಿನ್ನೆಲೆಯಲ್ಲಿ ಅನಂತಕುಮಾರ್ ಅವರ ಕೊಡುಗೆ ಎಂಥದ್ದು ಅನ್ನುವುದು ನಾಡಿನ ಆರೂವರೆ ಕೋಟಿ ಜನರಿಗೆ ಗೊತ್ತಿದೆ. ನಮ್ಮಲ್ಲಿ ಇರುವಂಥ ಪ್ರತಿಯೊಬ್ಬ ಕಾರ್ಯಕರ್ತನಿಗಂತೂ ಗೊತ್ತಿರುವ ಸಂಗತಿಯೇ. ಅವರು ಇನ್ನೂ ಬಹಳ ವರ್ಷ ಬದುಕಿರಬೇಕಾಗಿತ್ತು. ಈ ನಾಡನ್ನು ಈ ದೇಶವನ್ನು ಕಟ್ಟುವಂಥ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವಂಥ ಒಳ್ಳೆಯ ಅವಕಾಶ ಅವರಿಗಿತ್ತು. ಬಹುಶ: ಈ ದೇಶದ ಯಾವುದೇ ರಾಜ್ಯದ ಯಾವುದೇ ಮುಖ್ಯಮಂತ್ರಿ, ಯಾವುದೇ ಮುಖಂಡರ ಹೆಸರನ್ನು ಹಿಡಿದು ಮಾತನ್ನಾಡಿ ಎಲ್ಲರ ಜೊತೆಗೆ ನಿರಂತರ ಸಂಪರ್ಕ ಇಟ್ಟುಕೊಂಡಂಥ ಯಾವುದಾದರೂ ವ್ಯಕ್ತಿ ಕೇಂದ್ರದಲ್ಲಿ ಸಚಿವರಾಗಿದ್ದವರು ಇದ್ದರು ಅಂತ ಹೇಳಿದರೆ ಅವರು ನಮ್ಮ ಅನಂತಕುಮಾರ್.

ನಾನು ಎಲ್ಲಾದರೂ ಯಾವುದೇ ಸಭೆಗೆ ಹೋಗಬೇಕು ಅಂದರೆ ಫೋನ್ ಮಾಡಿ ಅಥವಾ ಸಿಕ್ಕಾಗ "ಅನಂತಕುಮಾರ್, ಈ ಸಭೆಗೆ ಹೋಗುತ್ತ ಇದ್ದೀನಿ, ನಾನು ಏನು ಮಾತನ್ನಾಡಬೇಕು?" ಅಂದರೆ ಐದು ನಿಮಿಷದಲ್ಲಿ ಭಾಷಣವನ್ನು ತಯಾರು ಮಾಡಿಕೊಡುತ್ತ ಇದ್ದರು. ಆ ಭಾಷಣ ಎಷ್ಟು ಅದ್ಭುತವಾಗಿ ಇರುತ್ತ ಇತ್ತು ಅಂದರೆ ಅಂಕಿ, ಅಂಶಗಳ ಜೊತೆಗೆ ಬೇಕಾದ ಎಲ್ಲ ವಿವರಗಳೂ ಇರುತ್ತಿದ್ದವು. ಅವರ ನೆನಪಿನ ಶಕ್ತಿಗೆ ಇಲ್ಲಿ ನಾವು ಯಾರನ್ನೂ ಹೋಲಿಕೆ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಅಂಥವರನ್ನು ನಾವು ಕಳೆದುಕೊಂಡಿದ್ದೇವೆ, ಈ ಕಾರ್ಯಕ್ರಮವನ್ನು ನಾವು ಮಾಡುತ್ತ ಇದ್ದೇವೆ.

ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರ ಸಂಪುಟದಲ್ಲಿ ಅವರು ಮಾಡಿದಂಥ ಕೆಲಸ ಕಾರ್ಯಗಳು ನಂತರ ಬೇರೆ ಬೇರೆ ಇಲಾಖೆಯಲ್ಲಿ ಅವರು ಮಾಡಿರುವಂಥ ಕೆಲಸ ಆಗಾಧವಾದಂಥದ್ದು. ಬೆಂಗಳೂರಿನ ಸಮಗ್ರ ಅಭಿವೃದ್ಧಿ ಬಗ್ಗೆ ಅವರ ಕನಸು ಏನಿತ್ತು, ಆ ಕನಸನ್ನು ನನಸು ಮಾಡುವಂಥ ದೊಡ್ಡ ಜವಾಬ್ದಾರಿ ನಮ್ಮ ಮೇಲೆ ಇದೆ ಅದನ್ನ ಮಾಡೋದಕ್ಕೆ ನಾವು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳಲು ಇಚ್ಛಿಸುತ್ತೇನೆ. ಬೆಂಗಳೂರಿನ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ, ಮೆಟ್ರೋ ಯೋಜನೆ, ಸುವರ್ಣ ಹೆದ್ದಾರಿ ಇವೆಲ್ಲವುಗಳ ರೂಪದಲ್ಲಿ ಬೆಂಗಳೂರಿನ ಅಭಿವೃದ್ಧಿಗೆ ಅವರ ಒತ್ತಾಸೆ ಅನನ್ಯವಾದಂಥದ್ದು.



ಸಾಹಿತ್ಯದಲ್ಲಿ ಅವರ ಅಭಿರುಚಿ, ಅಧ್ಯಯನ ಶೀಲತೆ ಅವರ ವ್ಯಕ್ತಿತ್ವಕ್ಕೆ ಮೆರುಗು ತರುತ್ತ ಇತ್ತು. ಬಹುಶ: ಅವರಿಗಿದ್ದ ಹಿಂದಿ ಭಾಷಾಜ್ಞಾನ ಯಾವುದಾದರೂ ಸಭೆಗಳಲ್ಲಿ ಅವರು ಮಾತನ್ನಾಡತಕ್ಕಂಥ ರೀತಿ, ನೀತಿಗಳನ್ನು ನಾವು ನೀವು ಕಲ್ಪನೆ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಬಹಳ ಹತ್ತಿರದಿಂದ ನೀವೆಲ್ಲ ನೋಡಿದ್ದಂತೆ, ಕೇಂದ್ರದ ಎಲ್ಲ ನಾಯಕರೊಂದಿಗೆ ದೇಶದ ನಾಯಕರೊಂದಿಗೆ ಅವರು ಅತ್ಯಂತ ಒಳ್ಳೆಯ ಸಂಬಂಧವನ್ನು ಇಟ್ಟುಕೊಂಡಿದ್ದರು. ದೆಹಲಿಯ ಅವರ ಮನೆಗೆ ಹೋದರೆ ಅವರು ಒಬ್ಬರೇ ಇದ್ದುದನ್ನು ನಾನು ಜೀವನದಲ್ಲಿ ಎಂದೂ ನೋಡಲಿಲ್ಲ. ದೇಶದ ಬೇರೆ ಬೇರೆ ಭಾಗದ, ರಾಜ್ಯದ ಬೇರೆ ಬೇರೆ ಭಾಗದ ನಾಯಕರು ಬರಬೇಕು ಚರ್ಚೆ ಮಾಡಬೇಕು ಸಮಾಲೋಚನೆ ಮಾಡುತ್ತಿರಬೇಕು.

ಲೋಕಸಭೆಯೊಳಗಡೆ ಅವರ ಛೇಂಬರ್‌ಗೆ ಯಾವುದೇ ರಾಜ್ಯದವರು ಬರಲಿ ಅವರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಅಲ್ಲಿಗೇ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ, ಮಂತ್ರಿಗಳನ್ನು ಕರೆಸಿ ಸ್ಥಳದಲ್ಲೇನೇ ಅವರ ಕೆಲಸಗಳನ್ನು ಮಾಡಿಕೊಟ್ಟು ಕಳುಹಿಸಿಕೊಡತಕ್ಕಂಥ ಇದ್ದ ವ್ಯಕ್ತಿ ಅನಂತಕುಮಾರ್ ಅವರನ್ನು ನಾವು ಮರೆಯುವುದಕ್ಕೆ ಆಗುವುದಿಲ್ಲ.

ವಿಧಿಯ ಆಟ ! ಕೇವಲ ೫೯ ವರ್ಷದ ವಯಸ್ಸಿನಲ್ಲಿ ಯಾವುದೇ ಸುಳಿವು ಕೊಡದೆ ನಮ್ಮನ್ನೆಲ್ಲ ಬಿಟ್ಟು ಹೋಗಿದ್ದಾರೆ. ಅವರ ಅನುಪಸ್ಥಿತಿ ಕೇಂದ್ರದಲ್ಲಿ, ರಾಜ್ಯದಲ್ಲಿ ಎದ್ದು ಕಾಣುತ್ತ ಇದೆ. ಅವರ ಉತ್ಸಾಹ, ಚೈತನ್ಯ ಸೇವಾಭಾವನೆಗಳನ್ನು ಮುಂದುವರೆಸಿಕೊಂಡು ಹೋಗುವ ಪ್ರಯತ್ನವಾಗಿ ಇವರು ಅನಂತಕುಮಾರ್ ಪ್ರತಿಷ್ಠಾನ ಪ್ರಾರಂಭಿಸುತ್ತ ಇರುವುದು ಬಹಳ ಒಳ್ಳೆಯ ಕೆಲಸ.

ಮುಂದಿನ ಹೊಸ ಪೀಳಿಗೆಗೆ ಒಂದು ಚೈತನ್ಯ ತುಂಬುವಂಥ ಒಳ್ಳೆಯ ಕೆಲಸ ಆಗುತ್ತೆ ಅನ್ನುವಂಥ ವಿಶ್ವಾಸ ನನಗೆ ಇದೆ. ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಅದಮ್ಯ ಚೈತನ್ಯ ಫೌಂಡೇಷನ್ ಮೂಲಕ ಬಹಳ ದೊಡ್ಡ ಹಾಗೂ ಉತ್ತಮವಾದ ಕೆಲಸವನ್ನು ಮಾಡುತ್ತ ಇದ್ದಾರೆ. ಒಬ್ಬ ಹೆಣ್ಣುಮಗಳು ಇಷ್ಟು ದೊಡ್ಡ ಪ್ರಮಾಣದಲ್ಲಿ ಜವಾಬ್ದಾರಿಯನ್ನು ವಹಿಸಿಕೊಂಡು ಮಾಡುವುದಕ್ಕೆ ಸಾಧ್ಯವಿದೆ ಅಂತ ಈ ನಾಡಿನ, ದೇಶದ ಹೆಣ್ಣುಮಕ್ಕಳಿಗೆ ಒಂದು ಮೇಲ್‌ಪಂಕ್ತಿ ನಮ್ಮ ತೇಜಸ್ವಿನಿ ಅನಂತಕುಮಾರ್ ಅವರು. ಮುಂದೆ ಬರುವ ದಿವಸಗಳಲ್ಲಿ ಪ್ರತಿಷ್ಠಾನದ ಕೆಲಸ ಸಮರ್ಪಕವಾಗಿ ನಡೆಯುವಂತಾಗಲಿ. ಅನಂತಕುಮಾರ್ ಕೆಲಸ ಅಂತ ಹೇಳಿದರೆ ಅದು ನಮ್ಮ ಕೆಲಸ. ಅವರ ನೆನಪು ಸದಾ ಉಳಿಬೇಕು. ಯುವ ಜನತೆಗೆ ಅವರ ಮಾರ್ಗದರ್ಶನ, ಅವರ ಚಿಂತನೆಗಳು ತಿಳಿಯುವಂತಾಗಬೇಕು. ಈ ದೃಷ್ಟಿಯಿಂದ ಏನೇನು ನಾವು ಕಾರ್ಯಕ್ರಮವನ್ನ ರೂಪಿಸಬಹುದೋ ಅದೆಲ್ಲವನ್ನೂ ನಾವು ನೀವು ಸೇರಿ ಮಾಡೋಣ . ಅನಂತಕುಮಾರ್ ಅವರು ಹೇಳುತ್ತ ಇದ್ದ ಒಂದು ಮಾತು- ಸಾಧನೆ ಮಾತಾಡಬೇಕು, ಮಾತನ್ನಾಡುವುದೇ ಸಾಧನೆಯಾಗಬಾರದು. ಅದು ನನ್ನ ಜೀವನದಲ್ಲಿ ನಿತ್ಯ ಸ್ಮರಣೆ ಮಾಡಿಕೊಳ್ಳುವಂಥ ಮಾತು ಅದು. ನಾನೂ ಸಹ ಎಲ್ಲ ಕಡೆ ಅನಂತಕುಮಾರ್ ಅವರು ಹೇಳಿದಂಥ ಮಾತನ್ನೇ ಪುನರುಚ್ಚಾರಣೆ ಮಾಡುತ್ತ ಇದ್ದೇನೆ. ಇವತ್ತು ಏನಾದರೂ ಈ ಸ್ಥಾನದಲ್ಲಿ ನಾನು ನಿಂತಿದ್ದೇನೆ ಅಂತ ಹೇಳಿದರೆ ಅದಕ್ಕೆ ಅನಂತಕುಮಾರ್ ಕೊಡುಗೆ ಇಷ್ಟು ದೊಡ್ಡ ಪ್ರಮಾಣದ್ದು ಅನ್ನುವದನ್ನು ನಾನು ಶಬ್ದಗಳಲ್ಲಿ ವರ್ಣನೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಜೀವನದುದ್ದಕ್ಕೂ ಅವರು ಮಾಡಿದಂಥ ಕಾರ್ಯ, ಅವರು ನಮಗೆ ತೋರಿಸಿದಂಥ ದಾರಿ, ಆ ದಾರಿಯಲ್ಲಿ ನಡೆಯುವುದು ಒಂದೇ ಉಳಿದಂಥ ಮಾರ್ಗ ಆ ಕೆಲಸವನ್ನು ನಾವೂ ನೀವೂ ಸೇರಿ ಮಾಡೋಣ ಎಂದು ಹೇಳುತ್ತ ಮತ್ತೊಮ್ಮೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(೨೨ ಸೆಪ್ಟೆಂಬರ್ ೨೦೧೯ ರಂದು ಬೆಂಗಳೂರಿನಲ್ಲಿ ಜರುಗಿದ ಅನಂತಕುಮಾರ್ ಪ್ರತಿಷ್ಠಾನದ ಪ್ರಾರಂಭೋತ್ಸವದಲ್ಲಿ ಮಾಡಿದ ಉದ್ಘಾಟನಾ ಭಾಷಣ)

# ನೇತೃತ್ವ-ವ್ಯಕ್ತಿತ್ವ-ಕರ್ತೃತ್ವಗಳ ಸ್ಫೂರ್ತಿ

**ಅನಂತಕುಮಾರ್ ಪ್ರತಿಷ್ಠಾನದ ಪ್ರಾರಂಭೋತ್ಸವದಲ್ಲಿ ಮಾಡಿದ ಭಾಷಣ**

ಅನಂತಕುಮಾರ್ ಅವರ ಹುಟ್ಟಿದ ಹಬ್ಬದ ದಿನ ೨೨ ಸೆಪ್ಟೆಂಬರ್. ಕಳೆದ ಕೆಲವು ವರ್ಷಗಳಿಂದ ತಮ್ಮ ಹುಟ್ಟುಹಬ್ಬ ಬಂದಿತೆಂದರೆ ಪ್ರತಿ ವರ್ಷ ಅವರಿಗೆ ಒಂದು ಹೊಸ ಹೊಸ ಯೋಚನೆ ಬರುತ್ತ ಇತ್ತು. ಪ್ರತಿ ವರ್ಷದ ಒಂದು ಹೊಸ ಉತ್ಸಾಹದ ಜೊತೆಗೆ ೨೦೧೫ರಲ್ಲಿ ಅನಂತವನ ಎಂಬ ಹೆಸರಿಟ್ಟು ೫೯ ಗಿಡನೆಡುವ ಕಾರ್ಯಕ್ರಮ ಇರಬಹುದು. ಅದರ ಮುಂದಿನ ವರ್ಷ ಕಾಶ್ಮೀರ ಸಂತ್ರಸ್ಥರಿಗೆ ಸೋಲಾರ್ ಲೈಟ್‌ಗಳನ್ನು ಕೊಡುವಂಥ ಕಾರ್ಯಕ್ರಮ ಇರಬಹುದು. ಮತ್ತೊಮ್ಮೆ ಅಮೃತ ಶಿಶುನಿವಾಸದ ಮಕ್ಕಳಿಗೆ ಬಟ್ಟೆ ಕೊಡುವುದು ಇರಬಹುದು. ಈ ತರಹದಲ್ಲಿ ಪ್ರತಿ ವರ್ಷ ಹೊಸ ಹೊಸ ರೀತಿಯಲ್ಲಿ ಅನಂತಕುಮಾರ್ ಅವರ ಜನ್ಮದಿನ ಆಚರಿಸುತ್ತ ಬಂದಿದ್ದೀವಿ. ಮತ್ತೆ ಸೆಪ್ಟೆಂಬರ್ ೨೨ ಬಂದಿದೆ. ಬಹಳ ಭಾರವಾದ ಹೃದಯದಿಂದ ನಾವೆಲ್ಲ ಇವತ್ತು ಸೇರಿದ್ದೀವಿ. ಅನಂತಕುಮಾರ್ ಅವರಿಗೆ ೬೦ ವರ್ಷ ಆಗಿರುತ್ತಿತ್ತು.

ತಮ್ಮ ೪೦ ವರ್ಷದ ಸಾರ್ವಜನಿಕ ಜೀವನದಲ್ಲಿ ಅವರು ಗಳಿಸಿರುವುದು ದೊಡ್ಡ ಬಳಗ. ಅವರ ನೇತೃತ್ವ, ವ್ಯಕ್ತಿತ್ವ ಮತ್ತು ಕರ್ತೃತ್ವಗಳು ಅತ್ಯಂತ ಪ್ರಭಾವಶಾಲಿಯಾಗಿದ್ದವು ಎಂದು ನಾವು ಹೇಳಬಹುದು. ಅವರು ತಮ್ಮ ೧೬ನೇ ವಯಸ್ಸಿನಲ್ಲೇ ಪಿ.ಯು.ಸಿ. ಮೊದಲ ವರ್ಷದ ವಿದ್ಯಾರ್ಥಿಯಾಗಿದ್ದಾಗಲೇ ಒಬ್ಬ ನಾಯಕನಾಗಿ ಹೊರಹೊಮ್ಮಿರುವಂಥವರು. ಅಷ್ಟಕ್ಕೆ ನಿಲ್ಲದೆಯೇ ತಮ್ಮಂತೆಯೇ ನೂರಾರು, ಸಾವಿರಾರು ನಾಯಕರನ್ನು ಬೆಳೆಸಿದರು. ನಾಯಕನಾಗಿ, ನೇತಾರರಾಗಿಯೇ ತನ್ನ ಕೊನೆಯವರೆಗೆ ಆ ನಾಯಕತ್ವದ ಗುಣವನ್ನು ತನ್ನಲ್ಲೂ ಬೆಳೆಸಿಕೊಳ್ಳುತ್ತ, ಬೇರೆಯವರಲ್ಲೂ ಬೆಳೆಸುತ್ತ ಬೆಳೆದಂಥವರು ಅನಂತಕುಮಾರ್ ಅವರು. ಆದರೆ. ಇನ್ನೊಂದು ಕಡೆ ನಿರಂತರವಾಗಿ ಕೆಲಸದಲ್ಲಿ ಮಗ್ನ. ಇನ್ನು ವಾರದ ಏಳೂ ದಿನ ಹಗಲು ರಾತ್ರಿ ಸಮಯವನ್ನು ನೋಡದೆ ನಿರಂತರ ಪ್ರವಾಸ. ಸೈಕಲ್ ತುಳಿಯುವುದರಿಂದ ಶುರುವಾದ ಪ್ರವಾಸ ಆಮೇಲೆ, ಕೆಂಪು ಬಸ್ಸು ನಂತರ ಟ್ರೈನ್ , ವಿಮಾನ. ಈ ತರಹದ ನಿರಂತರವಾದ ಪ್ರವಾಸದ ಮುಖಾಂತರ ದೇಶಾದ್ಯಂತ ಹಗಲಿರುಳೂ ತಿರುಗಿ ಕೆಲಸ ಮಾಡಿ ರೂಪುಗೊಂಡಂತಹ ಒಂದು ಕರ್ತೃತ್ವ ಶಕ್ತಿ ಅವರದು. ಅನಂತಕುಮಾರ್ ಅವರದು ಬಹಳ ವಿಶಿಷ್ಟವಾದ ವ್ಯಕ್ತಿತ್ವವಾಗಿತ್ತು. ಅನೇಕರು ನನಗೆ ಎಷ್ಟೋ ಸಲ ಹೇಳುತ್ತಾರೆ ಅನಂತಕುಮಾರ್ ಅವರನ್ನ ನಾನು ಮೂವತ್ತು ವರ್ಷದ ಹಿಂದೆ ಐದು ನಿಮಿಷ ಭೆಟ್ಟಿಯಾಗಿದ್ದೆ ಆ ಗಳಿಗೆಯನ್ನು ನನಗೆ ಯಾವತ್ತೂ ಮರೆಯಲಿಕ್ಕೆ ಸಾಧ್ಯವಿಲ್ಲ ಅಂತ. ಆ ಐದು ನಿಮಿಷದ ಭೇಟಿಯನ್ನು ಭೇಟಿಯಾದವರೂ ಮರೆತಿಲ್ಲ; ಅನಂತಕುಮಾರ್ ಅವರೂ ಅವರನ್ನು ಮರೆಯಲಿಲ್ಲ.



ಆ ರೀತಿ ತನ್ನ ಜೀವನದುದ್ದಕ್ಕೂ ತನ್ನ ಕುಟುಂಬದವರನ್ನು ಹೇಗೆ ಆತ್ಮೀಯತೆಯಿಂದ ಕಾಣುತ್ತಿದ್ದರೋ ಅದೇ ಆತ್ಮೀಯತೆಯಿಂದ ತನ್ನ ಜೊತೆಗಾರರನ್ನು ಭೆಟ್ಟಿಯಾದವರನ್ನು ಪ್ರೀತಿಯಿಂದ ಕಾಣುತ್ತಿದ್ದರು. ಎಷ್ಟರ ಮಟ್ಟಿಗೆ ಅಂದರೆ ಅವರ ಶಾಲೆಯಲ್ಲಿ ಓದುತ್ತಿದ್ದ ಅವರ ಸಹಪಾಠಿಗಳು ಹೇಗೋ ಹಾಗೆ ಈಗ ನಮ್ಮ ಶಾಲೆಗಳಲ್ಲಿ ಊಟ ಕೊಡುತ್ತಿರುವಂತಹ ಮಕ್ಕಳು ಅವರು ಸಹ ಅವರಿಗೆ ಮಿತ್ರರೇ. ಅವರ ಶಿಕ್ಷಕರು ಹೇಗೋ ಹಾಗೆ ಇವತ್ತು ಅವರ ಕಾರ್ಯಯೋಜನೆಯಲ್ಲಿ ಬರುವಂಥ ಶಿಕ್ಷಕರೂ ಅವರಿಗೆ ಅಷ್ಟೇ ಪ್ರೀತಿಪಾತ್ರರು. ಎಮರ್ಜೆನ್ಸಿಯ ಸಂದರ್ಭದಲ್ಲಿ ಅನಂತಕುಮಾರರ ಜೊತೆಗೆ ಜೈಲ್‌ಮೇಟ್ ಆಗಿರುವವರು ಇರಬಹುದು, ಕೇಂದ್ರದ ಕ್ಯಾಬಿನೆಟ್‌ನಲ್ಲಿ ಅವರ ಜೊತೆಗೆ ಇರುವಂಥ ಸಚಿವರು ಇರಬಹುದು.

ಎಲ್ಲರಲ್ಲೂ ಅದೇ ಪ್ರೀತಿ, ಅದೇ ವಿಶ್ವಾಸ, ಅದೇ ಬಳಗವನ್ನು ಅವರು ಬೆಳೆಸಿಕೊಂಡು ಬಂದರು. ಅವರು ಬೆಳೆದಂತೆಯೇ ಆ ಬಳಗವೂ ಬೆಳೆಯುತ್ತ ಹೋಯಿತು. ಕಳೆದ ಎಂಟು ತಿಂಗಳಲಿ ಬಹಳಷ್ಟು ಜನ ಅನಂತಕುಮಾರ್ ಅವರ ನೆನಪಿನಲ್ಲಿ, ಅನೇಕ ವಿಚಾರಗಳನ್ನು ಹೇಳುತ್ತ ಇದ್ದರು ಅವರ ಸ್ಮರಣೆಯಲ್ಲಿ ಆ ವ್ಯಕ್ತಿತ್ವ, ಆ ನೇತೃತ್ವ ಮತ್ತು ಆ ಕರ್ತೃತ್ವಗಳು ಪರಿಚಯ ಇನ್ನೂ ಹೆಚ್ಚು ಹೆಚ್ಚು ಜನಕ್ಕೆ ತಲುಪಬೇಕು. ಅವರ ಆ ಸ್ವಭಾವ, ಅವರ ಕೆಲಸಗಳು, ಅವನ್ನು ಮಾಡುವ ರೀತಿ, ಆ ವ್ಯಕ್ತಿತ್ವ ಅದು ಅವರ ಜೊತೆಗಾರರಿಗೆ ಸ್ಫೂರ್ತಿ ಮತ್ತು ಶಕ್ತಿಯಾಗಿವೆ. ಇವತ್ತು ಅನಂತಕುಮಾರ್ ಅವರು ಭೌತಿಕವಾಗಿ, ದೈಹಿಕವಾಗಿ ಇಲ್ಲಿ ಇಲ್ಲ ಅಂದರೂ ಅವರು ನಮ್ಮ ಜೊತೆಗೆ ಸದಾ ನಮ್ಮ ಮನಸ್ಸಿನಲ್ಲಿ ಇದ್ದಾರೆ.

ಅವರು ಆ ಶಕ್ತಿಯ ಮುಖಾಂತರ ಇದ್ದಾರೆ ಅನ್ನುವಂತಹ ಒಂದು ಭಾವನೆಯ ಜೊತೆಗೆ ಆ ಕೆಲಸಗಳನ್ನು ಅವರ ಕನಸುಗಳನ್ನು ನಾವು ಮುಂದೆ ತೆಗೆದುಕೊಂಡು ಹೋಗೋಣ ಎಂದು ಎಲ್ಲರೂ ಹೇಳುತ್ತ ಇದ್ದರು. ಹೀಗೆ ಹೇಳುವವರಲ್ಲಿ ನನ್ನ ಮಕ್ಕಳಿಂದ ಮೊದಲುಗೊಂಡು ಅನಂತಕುಮಾರರ ಸೋದರ ನಂದಕುಮಾರ್, ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿಗಳಾದ ಶಿವರಾಜ್‌ಸಿಂಗ್ ಚೌಹಾಣ್, ಅವರ ಸ್ನೇಹಿತ ರಾಜೀವ್ ಚಂದ್ರಶೇಖರ್, ಡಾ.ವಿಷ್ಣುಕಾಂತ್ ಚಟಪಲ್ಲಿಯವರು, ಮೊದಲಾದವರಲ್ಲದೆ ಇಂದು ಇಲ್ಲಿ ವೇದಿಕೆ ಮೇಲೆ ಇರುವಂತಹ ಪ್ರೊಫೆಸರ್ ಪಿ.ವಿ.ಕೃಷ್ಣಭಟ್ಟರು ಮೊದಲಾದ ಗಣ್ಯರೂ ಇದ್ದಾರೆ. ಪ್ರತಿಯೊಬ್ಬರಿಗೂ ತಾವು ಏನಾದರೂ ಮಾಡಬೇಕು. ಅನಂತಕುಮಾರ್ ತನ್ನ ಆ ಒಂದು ಕಡಿಮೆ ಅವಧಿಯಲ್ಲಿ ಎಲ್ಲ ಕೆಲಸ ಮಾಡಿ ತೋರಿಸಿದ್ದಾರೆ ಆ ಒಂದು ವ್ಯಕ್ತಿತ್ವದ ಕುರಿತಂತೆ ತಾವು ಏನಾದರೂ ಮಾಡಬೇಕು ಅಂತ ಯೋಚನೆ ಮೂಡಿದಾಗ ನಾವೆಲ್ಲರೂ ಪ್ರೊಫೆಸರ್ ಪಿ.ವಿ.ಕೃಷ್ಣಭಟ್ ಅವರನ್ನು ಕೇಳಿಕೊಂಡೆವು. ಅವರ ನೇತೃತ್ವದಲ್ಲಿ ಅನಂತಕುಮಾರ್ ಪ್ರತಿಷ್ಠಾನ ಅನ್ನುವಂಥ ಒಂದು ಪ್ರತಿಷ್ಠಾನ ಆಗಬೇಕು ಆಗಬೇಕು ಅಂತ ಹೇಳಿ ನಾವು ಅವರ ಹತ್ತಿರ ಕೇಳಿಕೊಂಡಾಗ ಆ ನೇತೃತ್ವವನ್ನು ವಹಿಸಲಿಕ್ಕೆ ಅವರು ಒಪ್ಪಿಕೊಂಡರು. ಪ್ರೊಫೆಸರ್ ಕೃಷ್ಣಭಟ್ಟರು ಕಳೆದ ಅನೇಕ ದಶಕಗಳಿಂದ ಸಾವಿರಾರು ಜನಕ್ಕೆ ಮಾರ್ಗದರ್ಶನ ಕೊಟ್ಟವರು. ಸ್ವತ: ಅನಂತಕುಮಾರ್ ಅವರಿಗೂ ಗುರುಗಳಾಗಿದ್ದವರು. ಅವರ ನೇತೃತ್ವದಲ್ಲಿ ಅನಂತಕುಮಾರ್ ಪ್ರತಿಷ್ಠಾನವು ಅನಂತಕುಮಾರರು ಪ್ರಾರಂಭಿಸಿದ್ದ ಹಲವಾರು ಕಾರ್ಯಗಳನ್ನು, ಅವರು ಕಂಡಿದ್ದ ಹಲವು ಕನಸುಗಳನ್ನು ಸಾಕಾರಗೊಳಿಸುವತ್ತ ಶ್ರದ್ಧಾಪೂರ್ವಕವಾಗಿ ಕಾರ್ಯತತ್ಪರವಾಗುವುದೆಂದು ಆಶಿಸಿ ಈ ನಿಟ್ಟಿನಲ್ಲಿ ತಮ್ಮೆಲ್ಲರ ಸಹಕಾರವನ್ನು ಬಯಸುತ್ತೇನೆ.

**-ತೇಜಸ್ವಿನಿ ಅನಂತಕುಮಾರ್**

# 'ಶಿಷ್ಯಾದಿಚ್ಛೇತ್ ಪರಾಜಯಂ'

ಪ್ರೊ. ಪಿ.ವಿ.ಕೃಷ್ಣಭಟ್

ಅಧ್ಯಕ್ಷರು - ಅನಂತಕುಮಾರ್ ಪ್ರತಿಷ್ಠಾನ



ಸನ್ಮಾನ್ಯ ಅನಂತಕುಮಾರ್ ಅವರು ಕೇವಲ ರಾಜಕೀಯ ನಾಯಕರಾಗಿ ಲೋಕಸಭಾ ಸದಸ್ಯರಾಗಿ ಬೆಂಗಳೂರನ್ನು ಪ್ರತಿನಿಧಿಸಿದ್ದುದು ಮಾತ್ರವಲ್ಲ. ಒಂದು ವಿಶಿಷ್ಟ ವಿಚಾರಧಾರೆಯ ಪ್ರತಿನಿಧಿಯಾಗಿ, ಒಬ್ಬ ಸಮಾಜ ಚಿಂತಕರಾಗಿ, ಒಬ್ಬ ಸಮರ್ಪಿತ ಮನೋಭಾವದ ಸಾಮಾಜಿಕ ಕಾರ್ಯಕರ್ತರಾಗಿ ಯುವಪೀಳಿಗೆಗೆ ಮಾರ್ಗದರ್ಶನ ಮಾಡಬಹುದಾದಂಥ, ಸ್ಪೂರ್ತಿಯನ್ನು ತುಂಬಬಲ್ಲಂಥ ಸ್ಪೂರ್ತಿದಾತರಾಗಿ ತಮ್ಮ ಜೀವನವನ್ನು ಕೊನೆಗೊಳಿಸಿದರು. ಈಗ ಅನಂತಕುಮಾರ್ ಅವರ ೬೦ನೆಯ ಜನ್ಮದಿನವನ್ನು ನಾವು. ಅವರ ಅನುಪಸ್ಥಿತಿಯಲ್ಲಿ ಆಚರಿಸಬೇಕಾದಂಥ ಒಂದು ಸಂದರ್ಭ ಒದಗಿ ಬಂದಿದೆ. ಸಂಸ್ಕೃತದಲ್ಲಿ ಒಂದು ಮಾತು ಇದೆ. ಮುಹೂರ್ತಂ ಜ್ವಲಿತಂ ಶ್ರೇಯಂ ನ ಚ ಧೂಮ್ರಾಹಿತಂ ಚಿರಂ ಎಂದರೆ, ದೀರ್ಘಕಾಲ ಹೊಗೆಯಾಗಿ ಬದುಕುವುದಕ್ಕಿಂತ ಕ್ಷಣಕಾಲ ಉರಿದು ಜ್ವಾಲೆಯಾಗಿ ಬದುಕತಕ್ಕಂಥದ್ದು ಶ್ರೇಯಸ್ಕರ. ಆ ರೀತಿಯ ಕ್ಷಣಕಾಲ ಜ್ವಾಲೆಯಂತೆ ಉರಿದು ಅಂತರ್ಧಾನವಾದಂತಹ ವ್ಯಕ್ತಿತ್ವ ಸನ್ಮಾನ್ಯ ಅನಂತಕುಮಾರ್ ಅವರದ್ದು.

ಅನಂತಕುಮಾರ್ ಅವರು ಇನ್ನೂ ನಮ್ಮ ನಡುವೆ ಇರಬೇಕಾಗಿತ್ತು ಎಂದು ಬಯಸತಕ್ಕಂಥ ಜನರ ಸಂಖ್ಯೆ ಇವತ್ತಿನ ದಿವಸ ಲಕ್ಷಲಕ್ಷಗಟ್ಟಲೆಗಳಲ್ಲಿ ಕೋಟಿಗಳಲ್ಲಿ ಇದೆ. ಆದರೆ ಭಗವಂತನ ಯೋಜನೆ ಬೇರೆಯೊಂದು ಇದ್ದಿರಬಹುದು ಅಂತ ನಾನು ಊಹೆ ಮಾಡುತ್ತೇನೆ. ಬಹುಶ: ಅವರ ಕರ್ತೃತ್ವಗಳನ್ನು ಗುರ್ತಿಸಿ ಮುಂದಿನ ಜನ್ಮದಲ್ಲಿ ಇನ್ನು ಹೆಚ್ಚಿನ ಮಹತ್ಕಾರ್ಯವನ್ನು ಅವರು ಮಾಡಬೇಕಾದದ್ದು ಇದೆಯೆಂದು ಭಾವಿಸಿ ಭಗವಂತ ಅವರನ್ನು ಕರೆದುಕೊಂಡಿರಬಹುದು ಎಂದು ನಾನು ಭಾವಿಸುತ್ತೇನೆ. ಅನಂತಕುಮಾರ್ ಅವರನ್ನು ಅವರ ವಿದ್ಯಾರ್ಥಿ ದೆಸೆಯಿಂದಲೂ ನೋಡುವ ಒಂದು ಸೌಭಾಗ್ಯ ನನಗೆ ಒದಗಿತ್ತು. ಹಲವು ಸಂದರ್ಭಗಳಲ್ಲಿ ಮಾತನಾಡುವಾಗ ಕೆಲವರು ನನ್ನನ್ನು ಅನಂತಕುಮಾರರ ಗುರುಗಳು ಅಂತ ಹೇಳುತ್ತಾರೆ. ನಾನು ಆ ಮಾತನ್ನು ಒಪ್ಪುವುದಿಲ್ಲ. ನಾನು ಆ ರೀತಿ ಗುರುವಾಗಿದ್ದೆನೆಂದು ಭಾವಿಸಿಕೊಂಡೂ ಇಲ್ಲ. ನಾವಿಬ್ಬರೂ ಒಂದು ಸಂಘಟನೆಯಲ್ಲಿ ಜೊತೆಗಾರರಾಗಿ ಕೆಲಸ ಮಾಡಿದ್ದೀವಿ. ನಾನು ಅವರಿಗಿಂತ ಒಬ್ಬ ಹಿರಿಯ ಕಾರ್ಯಕರ್ತ ಆಗಿದ್ದೆ. ಅವರು ನನ್ನ ಜೊತೆಯಲ್ಲಿ ಇದ್ದಂಥ ಸಹಕಾರಿ ಕಿರಿಯ ಕಾರ್ಯಕರ್ತ ಆಗಿದ್ದರು. ನನ್ನಿಂದ ಅವರು ಕೆಲವು ಸಂಗತಿಗಳನ್ನು ಕಲಿತಿದ್ದಾರೆ. ಹಾಗೆಯೇ ಅವರಿಂದಲೂ ನಾನು ಅನೇಕ ಸಂಗತಿಗಳನ್ನು ಕಲಿತಿದ್ದೀನಿ. ಸಂಸ್ಕೃತದಲ್ಲಿ ಒಂದು ಮಾತು ಇದೆ. ಶಿಷ್ಯಾದಿಚ್ಛೇತ್ ಪರಾಜಯಂ ಅಂತ . ಆ ರೀತಿ ನನ್ನನ್ನು ಮೀರಿ ಮೇಲೆ ಬೆಳೆದವರು ಅವರು. ನಾನು ಅವರಿಗೆ ಏನೂ ಕಲಿಸಿಕೊಟ್ಟಿದ್ದೇನೋ ಅದಕ್ಕಿಂತಲೂ ಹೆಚ್ಚು ಎತ್ತರಕ್ಕೆ ಏರಿದಂಥ, ನಾವೆಲ್ಲರೂ ಬೆಕ್ಕಸಬೆರಗಾಗುವ ಹಾಗೆ ಔನ್ನತ್ಯದ ಕೀರ್ತಿಯ ಶಿಖರವನ್ನು ಏರಿದಂಥ ವ್ಯಕ್ತಿತ್ವ ಶ್ರೀಯುತ ಅನಂತಕುಮಾರ್ ಅವರದ್ದು. ವಿದ್ಯಾರ್ಥಿ ದೆಸೆಯಲ್ಲಿ ವಿದ್ಯಾರ್ಥಿಪರಿಷತ್ತಿನ ಕಾರ್ಯಕರ್ತರಾಗಿ ಮಾತ್ರವಲ್ಲ, ನಾಯಕರಾಗಿಯೇ ಅವರು ಹೊರ ಹೊಮ್ಮಿದ್ದರು. ವಿದ್ಯಾಭ್ಯಾಸದ ಕಾಲದಲ್ಲಿ ಬಹಳ ತುಂಟ ವಿದ್ಯಾರ್ಥಿ ಅಂತ ಹೆಸರಾಗಿದಂಥವರು.

ಅವರ ಕಾಲೇಜಿನ ಪ್ರಾಚಾರ್ಯರು, ಅಧ್ಯಾಪಕರು ಎಲ್ಲರೂ ಕೂಡ ಸಾಕಷ್ಟು ಇವರ ಮೇಲೆ ದೂರು ಹೇಳತಕ್ಕಂಥದ್ದು ನಡೆಯುತ್ತಲೇ ಇತ್ತು; ಮಾತ್ರವಲ್ಲ. ಒಂದು ಸಂದರ್ಭದಲ್ಲಿ ಅವರ ತಾಯಿಯವರು ಕೂಡ ಒಮ್ಮೆ ನನ್ನ ಹತ್ತಿರ ದೂರಿಕೊಂಡಿದ್ದುಂಟು, ಇವನು ಇಷ್ಟೊಂದು ತುಂಟತನ ಮಾಡುತ್ತ ಇದ್ದಾನೆ ಇವನು ಮುಂದೆ ಏನಾಗುತ್ತಾನೋ ಎಂದು ನನಗೆ ಚಿಂತೆ ಆಗಿದೆ ಅಂತ ಹೇಳುವಷ್ಟರಮಟ್ಟಿಗೆ ಅನಂತಕುಮಾರರ ವರ್ತನೆಯಿತ್ತು. ಅವರ ತಾಯಿಯವರು ಸಾಮಾಜಿಕ ಚಟುವಟಿಕೆಗಳಲ್ಲಿ ಸಾಕಷ್ಟು ಸಕ್ರಿಯರಾಗಿದ್ದಂಥವರು. ಸರ್ವೋದಯ ಚಳುವಳಿಯಲ್ಲಿ ಇದ್ದಂಥವರು. ಅವರ ತಂದೆಯವರು ಬಹಳ ನಿಷ್ಠಾವಂತರಾದಂಥ, ಬಹಳ ಸಾತ್ವಿಕ ಜೀವನವನ್ನು ನಡೆಸಿದಂಥ ಒಬ್ಬ ವ್ಯಕ್ತಿ. ತಾಯಿತಂದೆಯವರ ಈ ಎಲ್ಲ ಗುಣಗಳನ್ನು ಅನಂತಕುಮಾರ್ ಅವರು ಬಳುವಳಿಯಾಗಿ ಗಳಿಸಿದ್ದರು.

ಐ.ಎ.ಎಸ್.ಪರೀಕ್ಷೆಗೆ ಕಟ್ಟಬೇಕು ಆಡಳಿತ ಕ್ಷೇತ್ರಕ್ಕೆ ಹೋಗಬೇಕು ಅಂತ ಅವರ ಅಪೇಕ್ಷೆ ಇತ್ತು. ಆದರೆ ಬಹುಶ: ಅವರ ಹಾದಿಯನ್ನು ತಪ್ಪಿಸಿ ಸಾಮಾಜಿಕ ಚಟುವಟಿಕೆಗಳಲ್ಲಿ ಅವರು ಬರಬೇಕು ಅಂತ ಹೇಳಿ ಸೆಳೆಯುವುದರಲ್ಲಿ ನನ್ನದು ಒಂದು ಸ್ವಲ್ಪ ಪಾತ್ರ ಇದೆಯೆಂದು ನಾನು ಭಾವಿಸುತ್ತೇನೆ. ಅನಂತಕುಮಾರ್ ವಿದ್ಯಾರ್ಥಿ ಪರಿಷತ್ತಿನ ಪೂರ್ಣಾವಧಿ ಕಾರ್ಯಕರ್ತರಾಗಿ ಕೆಲಸ ಮಾಡಿದ್ದರು. ಹಲವು ವರ್ಷಗಳ ಕಾಲ ಇಡೀ ಪ್ರಪಂಚದಾದ್ಯಂತ ಬಿರುಗಾಳಿಯಂತೆ ಸಂಚಾರ ಮಾಡಿ ವಿದ್ಯಾರ್ಥಿ ಪರಿಷತ್ತಿನ ಒಂದು ಸಂಘಟನೆಯನ್ನು ನಿರ್ಮಾಣ ಮಾಡುವುದರ ಜೊತೆಯಲ್ಲಿ ಅನೇಕ ವಿದ್ಯಾರ್ಥಿಗಳಿಗೆ ರಾಷ್ಟ್ರಭಾವನೆಯ ಜಾಗೃತಿಯನ್ನೂ ಪ್ರೇರಣೆಯನ್ನೂ ಕೊಟ್ಟಂಥ ಒಬ್ಬ ಪ್ರೇರಕ ಶಕ್ತಿಯಾಗಿ ಅವರು ಇದ್ದರು. ವಿಶೇಷವಾಗಿ ಉಲ್ಲೇಖ ಮಾಡಬಹುದಾದಂಥ ಒಂದು ಸಂಗತಿ ಏನೆಂದರೆ ಅವರ ನೆನಪಿನ ಶಕ್ತಿ. ಬಹುಶ: ಇಡೀ ರಾಜ್ಯದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಮಂದಿಯನ್ನು ಅವರು ಹೆಸರು ಹಿಡಿದು ಕರೆಯಬಲ್ಲವರಾಗಿದ್ದರು; ಆ ರೀತಿಯ ಗುರುತು ಹಿಡಿಯುವುದು ಮಾತ್ರವಲ್ಲ ಅವರ ಜೊತೆಯಲ್ಲಿ ಒಂದು ಆತ್ಮೀಯವಾದ ಸ್ನೇಹವನ್ನು ಸಂಪಾದಿಸುವಂಥ ಶಕ್ತಿ ಅವರಿಗಿತ್ತು. ಭಾವ್ರೂರಾವ್ ದೇಶಪಾಂಡೆಯವರು ಹೋದ ನಂತರ ಕರ್ನಾಟಕದಲ್ಲಿ ಸಂಘಟನೆಯ ಕೆಲಸ ಮಾಡತಕ್ಕಂಥ ಒಬ್ಬ ಹಿರಿಯರ, ಒಬ್ಬ ಕಾರ್ಯಕರ್ತರ ಅವಶ್ಯಕತೆ ಬಹಳ ಇತ್ತು. ಆ ಸಂಧರ್ಭದಲ್ಲಿ ಅನಂತಕುಮಾರ್ ಅವರ ಕರ್ತೃತ್ವವನ್ನು ಗುರ್ತಿಸಿ ಸಂಘಟನೆಯ ಹಿರಿಯರು ಅವರಿಗೆ ರಾಜಕೀಯ ಕ್ಷೇತ್ರಕ್ಕೆ ಹೋಗುವುದಕ್ಕೆ ಪ್ರೇರಣೆ ಕೊಟ್ಟರು. ಮೊದಲು ಹೇಳಿದಂತೆ ಅನಂತಕುಮಾರ್ ಅವರಿಗೆ ಐ.ಎ.ಎಸ್.ಮಾಡಬೇಕು ಅನ್ನುವ ಅಪೇಕ್ಷೆ ಬಹಳ ಇತ್ತು. ಬಹುಶ: ಅವರನ್ನ ಹಾದಿ ತಪ್ಪಿಸಿದವನು ನಾನೇ ಅಂತ ಕಾಣಿಸುತ್ತೆ. ಅವರು ಆಗಿಂದಾಗ್ಗೆ ಹೇಳುತ್ತ ಇದ್ದರು : ಪರೀಕ್ಷೆಗೆ ಹೋಗಬೇಕು ಅಂತ ಹೇಳಿ ಅವರು ಹಾಲ್‌ಟಿಕೇಟ್ ತಂದು ಇಟ್ಟುಕೊಂಡಿದ್ದರಂತೆ, ಆ ಹಾಲ್ ಟಿಕೇಟನ್ನು ನಾನು ಹರಿದು ಹಾಕಿದೆ ಅಂತ ಅವರು ಹೇಳುತ್ತ ಇದ್ದರು, ಹೌದೋ ಅಲ್ಲವ್ರೋ ನನಗೆ ನೆನಪಿಲ್ಲ. ಹೀಗಾಗಿ ನಿನ್ನ ಕ್ಷೇತ್ರವೇ ಬೇರೆ, ನೀನು ಆಡಳಿತ ಕ್ಷೇತ್ರಕ್ಕೆ ಹೋಗೋ ಅವಶ್ಯಕತೆ ಇಲ್ಲ. ನಿನಗಾಗಿ ಬೇರೆ ಕೆಲಸ ಇದೆ ಅದಕ್ಕೆ ನಿನ್ನ ಅವಶ್ಯಕತೆ ಇದೆ ಅಂತ ಹೇಳಿ ಅವರನ್ನು ಈ ದಾರಿಗೆ ತರೋದರಲ್ಲಿ ನನ್ನದು ಒಂದು ಸಣ್ಣ ಪಾತ್ರ ಇತ್ತು.

ಅನಂತಕುಮಾರ್ ರಾಜಕೀಯ ಕ್ಷೇತ್ರಕ್ಕೆ ಹೋದ ನಂತರ ಇಡೀ ಪ್ರಾಂತ್ಯದಲ್ಲಿ ನಿರಂತರವಾಗಿ ಬಿರುಗಾಳಿಯಂತೆ ಪ್ರವಾಸ ಮಾಡಿದ್ದರು. ನಿಜಕ್ಕೂ ಅವರ ಪ್ರವಾಸದ ಕ್ಷಮತೆ ಇದೆಯಲ್ಲ ಅದು ಅವರ ಅವರ ನೆನಪಿನ ಶಕ್ತಿಯಂತೆಯೇ ಅದ್ಭುತವಾದದ್ದು ಎನ್ನಬೇಕು. ಎಷ್ಟೋ ಸಂದರ್ಭಗಳಲ್ಲಿ ಅವರು ಪ್ರವಾಸ ಮಾಡಿಕೊಂಡು ಅವರು ನಮ್ಮ ಮನೆಗೆ ಬರುತ್ತ ಇದ್ದರು. ಸಾಯಂಕಾಲವ್ರೋ ರಾತ್ರಿಯೋ ಒಂದು ಗಂಟೆ, ಎರಡು ಗಂಟೆ ಅವರು ನನ್ನ ಹತ್ತಿರ ಕುಳಿತುಕೊಂಡು ಮಾತಾಡಿ ತಕ್ಷಣ ಮುಂದಿನ ಊರಿಗೆ ಹೋಗುತ್ತೀನಿ ಎಂಬ ಧಾವಂತದಲ್ಲಿ ಮತ್ತೆ ಹೊರಟುಬಿಡುವರು. ಸ್ವಲ್ಪ ವಿಶ್ರಮಿಸಿಕೊಂಡು ಬೆಳಗ್ಗೆ ಹೋಗುವಿಯಂತೆ ಅಂತ ಹೇಳಿದರೆ ಒಂದು ಸಾರಿಯೂ ಕೇಳುತ್ತ ಇರಲಿಲ್ಲ. ಇಲ್ಲ ಇಲ್ಲ ನಾಳೆ ಬೆಳಿಗ್ಗೆ ಹೋಗಿ ತಲುಪಿಬಿಟ್ಟರೆ ಬೇರೆ ಊರಿನಲ್ಲಿ ಮುಂದಿನ ಕೆಲಸ ಮಾಡಬಹುದು ಅಂತ ಹೇಳಿ ಹೊರಟುಬಿಡುತ್ತಿದ್ದರು. ಈ ರೀತಿ ನಿರಂತರವಾಗಿ ಪ್ರವಾಸ ಮಾಡುತ್ತ ಸಂಘಟನೆಯನ್ನು ಕಟ್ಟುವುದರಲ್ಲಿ , ಕೆಲಸದಲ್ಲಿ ಶ್ರಮವಹಿಸಿದ ಒಬ್ಬ ನಿಷ್ಠಾವಂತ ಕಾರ್ಯಕರ್ತ ಸಿಗುವುದು ಅಪೂರ್ವ.

ಪುಟ - 5

ಬಹುಶ: ರಾಜಕೀಯ ಕ್ಷೇತ್ರದಲ್ಲಿ ಅವರಷ್ಟು ಪ್ರವಾಸ ಮಾಡಿರುವಂಥ ಇನ್ನೊಬ್ಬ ವ್ಯಕ್ತಿಯನ್ನ ನಾವು ಹೆಸರಿಸಬೇಕು ಅಂದರೆ ಸನ್ಮಾನ್ಯ ಬಿ.ಎಸ್.ಯಡಿಯೂರಪ್ಪನವರನ್ನು ಹೆಸರಿಸಬಹುದು. ಅವರಿಬ್ಬರ ಒಂದು ಜೋಡಿ ಗಾಳಿ, ಬೆಂಕಿಯ ಜೋಡಿಯಂತೆ ಎರಡೂ ಸೇರಿಕೊಂಡು ಇಡೀ ರಾಜ್ಯದಲ್ಲಿ ಒಂದು ಬಿರುಗಾಳಿಯನ್ನೇ ಅವತ್ತಿನ ದಿವಸ ನಿರ್ಮಾಣ ಮಾಡಿತ್ತು. ಆಗ ಭಾ.ಜ.ಪ. ಬಹಳ ಕ್ಷೀಣ ಸ್ಥಿತಿಯಲ್ಲಿ ಇದ್ದ ಕಾಲ. ಕೇವಲ ಇಬ್ಬರು ಶಾಸಕರಷ್ಟೇ ಇದ್ದರು ಅಂತ ಕಾಣುತ್ತೆ. ಅವರಲ್ಲೂ ಒಬ್ಬರು ಕೈ ತಪ್ಪಿ ಹೋಗಿದ್ದರು. ಒಬ್ಬರೇ ಒಬ್ಬರು ಶಾಸಕರು ಇದ್ದರು ಆ ಕಾಲದಲ್ಲಿ ಯಡಿಯೂರಪ್ಪನವರೂ ಅನಂತಕುಮಾರರೂ ಈ ಪಕ್ಷವನ್ನು ಮೂಲದಿಂದ ಕಟ್ಟಿದ್ದು, ಬೇರುಗಳ ಮಟ್ಟದಿಂದ ಸಂಘಟನೆಯನ್ನು ಕಟ್ಟಿದ್ದು ಮಾತ್ರವಲ್ಲ, ಅನಂತಕುಮಾರ್ ಅವರ ಒಂದು ವೈಶಿಷ್ಟ್ಯ ಅಂದರೆ ಇದಕ್ಕೆ ಬೇಕಾಗಿರತಕ್ಕಂಥ ಒಂದು ವೈಚಾರಿಕ ಹಿನ್ನಲೆಯನ್ನು ಒದಗಿಸಿ, ಇದಕ್ಕೊಂದು ಮಾರ್ಗವನ್ನು ಸ್ಪಷ್ಟಪಡಿಸಿದ್ದು. ಆ ನಂತರವೂ ಕೂಡ ಕೇಂದ್ರದ ಮಂತ್ರಿಗಳಾಗಿ ವಿಭಿನ್ನ ಜವಾಬ್ದಾರಿಯನ್ನ ನಿರ್ವಹಿಸಿ ಅವರು ತಮ್ಮ ಒಂದು ಬಹಳ ಕ್ರಿಯಾಶೀಲವಾಗಿರತಕ್ಕಂತಹ ಜೀವನವನ್ನು ಮುನ್ನಡೆಸಿದ್ದಾರೆ. ಕಾರ್ಯಕರ್ತನಾಗಿ ಇರುವವನಿಗೆ ಐದು ಸಂಗತಿಗಳು ಇರಬೇಕು ಅಂತ ಯಾರೋ ಹೇಳಿದ್ದಾರೆ. ಕಾಲುಗಳಲ್ಲಿ ಚಕ್ರ ಇರಬೇಕು. ಹೊಟ್ಟೆಯಲ್ಲಿ ಬೆಂಕಿ ಇರಬೇಕು, ನಾಲಿಗೆಯಲ್ಲಿ ಜೇನು ಇರಬೇಕು, ಕಣ್ಣುಗಳಲ್ಲಿ ಕರುಣೆ ಇರಬೇಕು. ತಲೆಯ ಮೇಲೆ ಮಂಜು ಇರಬೇಕು. ಈ ಐದು ಗುಣಗಳು ಇದ್ದರೆ ಅವನು ಆದರ್ಶ ಕಾರ್ಯಕರ್ತನಾಗುತ್ತಾನೆ ಎಂಬುದು ಈ ಸೂಕ್ತಿ. ಈ ಎಲ್ಲ ಗುಣಗಳು ಅನಂತಕುಮಾರ್ ಅವರಲ್ಲಿ ಇದ್ದವು ಎನ್ನುವುದರಲ್ಲಿ ಸಂಶಯವಿಲ್ಲ. ಅನಂತಕುಮಾರ್ ಅವರು ಯಾವ ಕಾರ್ಯಕ್ಕೋಸ್ಕರವಾಗಿ ತಮ್ಮ ಜೀವನವನ್ನ ಸವೆಸಿದರೋ ಆ ಕಾರ್ಯ ಮುಂದುವರಿಯಬೇಕು ಅನ್ನುವಂಥ ಉದ್ದೇಶಕ್ಕೋಸ್ಕರವಾಗಿ ಅನಂತಕುಮಾರ್ ಪ್ರತಿಷ್ಠಾನ ಎಂಬ ಟ್ರಸ್ಟ್ ಅನ್ನು ರಚನೆ ಮಾಡಬೇಕು ಎಂದು ಕೆಲವು ಹಿರಿಯರು ಆತ್ಮೀಯರು ಸೇರಿ ನಿರ್ಧಾರ ಮಾಡಿದ್ದಾರೆ. ಈ ಒಂದು ಸಂಸ್ಥೆ ಮುಖ್ಯವಾಗಿ ಅನೇಕ ವೈವಿಧ್ಯಮಯವಾಗಿರತಕ್ಕಂಥ ಸೇವಾ ಚಟುವಟಿಕೆಗಳನ್ನು ಕೈಗೊಳ್ಳಬೇಕು.

ಮುಖ್ಯವಾಗಿ ರಾಜಕೀಯ ಕ್ಷೇತ್ರದಲ್ಲಿ ಮುಂದುವರಿಯತಕ್ಕಂಥ ಕಾರ್ಯಕರ್ತರಿಗೆ ಪ್ರಶಿಕ್ಷಣ ಕೊಡುವಂಥ ಕೆಲಸ ಆಗಬೇಕಾಗಿದೆ. ಇವತ್ತು ಟ್ರೈನಿಂಗ್ ಅವಶ್ಯಕತೆ ಇಲ್ಲದೆ ಇರುವಂತ ಒಂದೇ ಕ್ಷೇತ್ರ ಅಂತ ಅಂದರೆ ರಾಜಕೀಯ ಕ್ಷೇತ್ರ ಅಂತ ಪ್ರಸಿದ್ಧಿಯಾಗಿಬಿಟ್ಟಿದೆ. ಯಾರು ಬೇಕಾದರು ಒಂದು ಸ್ವಲ್ಪ ಮಸಲ್ ಪವರ್, ಮನೀ ಪವರ್ ಇದ್ದುಬಿಟ್ಟರೆ ಅವರು ರಾಜಕೀಯ ಕ್ಷೇತ್ರದಲ್ಲಿ ಧುಮುಕಿಬಿಡಬಹುದು ರಾಜಕೀಯ ನಾಯಕರೂ ಆಗಬಹುದು ಅನ್ನುವಂಥ ವಾತಾವರಣ ಇವತ್ತು ನಿರ್ಮಾಣವಾಗುತ್ತಿದೆ. ಆದರೆ ದೇಶವನ್ನು, ರಾಜಕೀಯವನ್ನು ನಿರ್ವಹಿಸುವಂಥವರು ಸಮರ್ಪಕವಾದ ಶಿಕ್ಷಣವನ್ನು ಪಡೆದಿರಬೇಕು; ದೇಶದ ರಾಜಕೀಯದ ಬಗ್ಗೆ, ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಅವರಿಗೆ ಅರಿವು ಇರಬೇಕು; ಸಾಮಾಜಿಕ ಕಳಕಳಿ ಇರಬೇಕು. ಈ ರೀತಿಯ ಒಂದು ಕಾರ್ಯಕರ್ತರ ಪಡೆಯನ್ನು ತಯಾರುಮಾಡತಕ್ಕಂಥ ಒಂದು ಪ್ರಶಿಕ್ಷಣ ಸಂಸ್ಥೆಯನ್ನು ಪ್ರಾರಂಭ ಮಾಡಬೇಕೆಂಬುದು ಈ ಟ್ರಸ್ಟಿನ ಒಂದು ಮುಖ್ಯ ಉದ್ದೇಶ. ಈಗ ಹೇಗೆ ತೇಜಸ್ವಿನಿಯವರ ನೇತೃತ್ವದಲ್ಲಿ ಅದಮ್ಯ ಚೇತನ ಸಂಸ್ಥೆ ಅನೇಕ ಮುಖಗಳಲ್ಲಿ ಕಾರ್ಯಚಟುವಟಿಕೆಗಳನ್ನು ಮಾಡುತ್ತಿದೆಯೋ ಅದೇ ರೀತಿ ಕಾಲ ಕ್ರಮದಲ್ಲಿ ಇನ್ನು ಅನೇಕ ಮುಖಗಳಲ್ಲಿ ಈ ಚಟುವಟಿಕೆಗಳನ್ನು ವಿಸ್ತರಿಸಬೇಕು ಅನ್ನುವಂಥ ಯೋಜನೆಯನ್ನು ಕೂಡ ಈ ಪ್ರತಿಷ್ಠಾನ ಗುರಿಯಾಗಿ ಇಟ್ಟುಕೊಂಡಿದೆ. ಈ ಉದ್ದೇಶಕ್ಕೋಸ್ಕರವಾಗಿ ರಾಜ್ಯದ ಮತ್ತು ಇಡೀ ದೇಶದ ಅನೇಕ ಪ್ರಮುಖರ ಒಳಗೊಂಡಂಥ ಒಂದು ವಿಶ್ವಸ್ಥ ನಿಧಿಯನ್ನು ರಚನೆ ಮಾಡಲಾಗಿದೆ. ಇದಕ್ಕೆ ತಮ್ಮೆಲ್ಲರ ಸಹಕಾರ ಬೇಕು. ಇದು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರದೆ ರಾಷ್ಟವ್ಯಾಪಿಯಾಗಿ ಬೆಳೆಯಬೇಕು. ಇದಕ್ಕೆ ಅಗತ್ಯವಾದ ಸಹಯೋಗವನ್ನು ನೀಡಬೇಕೆಂದು ಅನಂತಕುಮಾರರೊಡನೆ ನಿಡುಗಾಲ ಕೆಲಸಮಾಡಿರುವ ಜೆ.ಪಿ.ನಡ್ಡಾಜೀಯವರನ್ನು ಕೇಳಿಕೊಳ್ಳುತ್ತೇನೆ. ಹಾಗೆಯೇ ಪ್ರತಿಷ್ಠಾನಕ್ಕೆ ಅಗತ್ಯವಾಗಿರತಕ್ಕಂಥ ನಿವೇಶನ ಇತ್ಯಾದಿಗಳನ್ನೂ ಅಗತ್ಯವಾದ ಸಹಕಾರವನ್ನೂ ನೀಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿ ಯಡಿಯೂರಪ್ಪನವರಲ್ಲಿ ನಾನು ವಿನಂತಿಮಾಡಿಕೊಳ್ಳುತ್ತಿದ್ದೇನೆ. ನಮಸ್ಕಾರ. ★



ಅನಂತಕುಮಾರರು ಮಾತಾಡಿದರೆ ಹೇಗೂ ಸುದ್ದಿಯಾಗುತ್ತೆ, ಆದರೆ, ಅನಂತಕುಮಾರ್ ಮೌನಿಯಾಗಿದ್ದರೂ ಸುದ್ದಿಯಾಗುತ್ತೆ. ಆಶ್ಚರ್ಯ ಮೌನಿಯಾದರೆ ಯಾರಾದರೂ ಸುದ್ದಿ ಮಾಡಲ್ಲ. ಆದರೆ ಅನಂತಕುಮಾರ್ ಮೌನ ತಳೆದಾಗಲೆಲ್ಲ ಅನಂತಕುಮಾರ್ ಬಗ್ಗೆ ಭಾರೀ ಸುದ್ದಿ ಮಾಡಿದಂಥ ಸಂದರ್ಭವನ್ನು ನಾವು ಕಂಡಿದ್ದೇವೆ. ಅಂದರೆ ಒಬ್ಬ ವ್ಯಕ್ತಿ ಹೇಗೆ ಎರಡು ತುದಿಗಳನ್ನು ಏಕ ಕಾಲದಲ್ಲಿ ಮುಟ್ಟಬಲ್ಲ ಅಂತ ಹೇಳುವಂಥದ್ದು. ಮಾತಾಡಿದ್ದರೂ ಸುದ್ದಿ, ಮೌನಿಯಾದರೂ ಸುದ್ದಿ. ಅನಂತಕುಮಾರ್ ಭಾಷಣ ಮಾಡಿದ್ದರೆ ಅದರಲ್ಲಿ ವಿಚಾರಗಳು ಇರುತ್ತಿದ್ದವು. ಅದರೊಡನೆ ಮಾತಿನಲ್ಲಿ ಹಾಸ್ಯ ಇರುತ್ತ ಇತ್ತು, ಅದರಲ್ಲಿ ವ್ಯಂಗ್ಯ ಇರುತ್ತ ಇತ್ತು. ಒಟ್ಟಾರೆ ಎಲ್ಲವನ್ನು ಕೂಡಿಸಿ ನೋಡಿದಾಗ ಅವರು ಯಾವ ವಿಚಾರದ ಬಗ್ಗೆ ಮಾತಾಡುತ್ತಾರೋ ಅವರು ಆ ವಿಚಾರದ ಬಗ್ಗೆ ಅತ್ಯಂತ ಅತ್ಯಂತ ಆಳವಾದಂಥ ಅಂಶಗಳನ್ನು ಜನರಿಗೆ ತಲುಪಿಸುವಲ್ಲಿ ವಿಶೇಷವಾಗಿ ಭಾರತೀಯ ಜನತಾ ಪಾರ್ಟಿಯ ಕಾರ್ಯಕರ್ತರಿಗೆ ತಲುಪಿಸುವಲ್ಲಿ ಸನ್ಮಾನ್ಯ ಅನಂತಕುಮಾರ್ ಎತ್ತಿದ ಕೈ ಅಂತ ನಾನು ಖಡಾಖಂಡಿತವಾಗಿ ಹೇಳಬಲ್ಲೆ.

# ನಗುವನ್ನು ಸಮಯದೊಡನೆ ಜೋಡಿಸಿದ ಅನಂತ

- ಡಿ.ವಿ ಸದಾನಂದಗೌಡ, ಕೇಂದ್ರ ಸಚಿವರು

ನಾನು ಆಗಾಗ್ಗೆ ನೆನಪಿಸಿಕೊಳ್ಳುವ ಒಂದು ಮಾತುಂಟು. ಸಮಯ ಮತ್ತು ನಗು- ಇವು ಇಡೀ ಜೀವನದ ಎರಡು ವಿಚಿತ್ರ ಸಂಗತಿಗಳು. ಪ್ರಮುಖ ಸಂಗತಿಯಲ್ಲ, ವಿಚಿತ್ರ ಸಂಗತಿಗಳು. ಹಲವಾರು ಸಂದರ್ಭಗಳಲ್ಲಿ ನಗು ಸಮಯವನ್ನೇ ಮರೆಸುತ್ತದೆ. ಇನ್ನು ಹಲವಾರು ಸಂದರ್ಭಗಳಲ್ಲಿ ಸಮಯದ ಬೇರೆ ಬೇರೆ ವ್ಯವಸ್ಥೆಗಳಿಗೆ ಜೋಡಣೆಯಾದಾಗ ನಗುವೇ ಮಾಯವಾಗುತ್ತದೆ. ಯಾವತ್ತೂ ಕೂಡ ಜಗತ್ತಿನಲ್ಲಿ ಸಮಯ ಮತ್ತು ನಗು ಎರಡೂ ಸಮಾನಾಂತರವಾಗಿ ರೈಲ್ವೆ ಹಳಿಯ ರೀತಿ ಹೋಗುತ್ತವೆಯೇ ಹೊರತು ಅವೆರಡೂ ಜೋಡಣೆಯಾದಂಥ ನಿದರ್ಶನಗಳೇ ಸಿಗುವುದಿಲ್ಲ. ಅನೇಕರು ಹೇಳುತ್ತಾರೆ - ಸದಾನಂದ ಗೌಡರು ಯಾವಾಗಲೂ ನಗುತ್ತಲೇ ಇರುತ್ತಾರೆ ಅಂತ. ಆದರೆ ಎಷ್ಟೋ ಸಂದರ್ಭದಲ್ಲಿ ಸಮಯದ ಆ ಬೇರೆ ಬೇರೆ ಹಂತಗಳಲ್ಲಿ ನಗುವನ್ನು ಮರೆಯುವಂಥದ್ದನ್ನು ನಾನು ಸ್ವತ: ಅನುಭವಿಸಿದ್ದೇನೆ. ಆದರೆ ಒಬ್ಬ ಮನುಷ್ಯ ಸಮಯ ಮತ್ತು ನಗು ಎರಡನ್ನೂ ಏಕಮುಖವಾಗಿ ತೆಗೆದುಕೊಂಡು ಹೋಗಿ ಎಲ್ಲೋ ಒಂದು ಕಡೆ ಜೋಡಣೆ ಮಾಡಿ ತೋರಿಸಿದ್ದಿದೆ. ಈ ಜಗತ್ತಿನಲ್ಲಿ ಅಸಾಧ್ಯವಾದದ್ದು ಯಾವುದೂ ಇಲ್ಲ. ಖಂಡಿತವಾಗಿ ಸಮಯವನ್ನು ನಗು ಮರೆಸುವುದೂ ಇಲ್ಲ, ನಗುವನ್ನು ಸಮಯವೂ ಮರೆಸುವುದಿಲ್ಲ ಎಂದು ತೋರಿಸಿಕೊಟ್ಟ ಒಂದು ಜ್ವಲಂತ ಉದಾಹರಣೆ ನಾವು ಯಾರಾದರೂ ಕಂಡಿದ್ದರೆ ಅದು ಅನಂತಕುಮಾರ್ ಅಂತ ನಾನು ಹೇಳಬಲ್ಲೆ.

ನಾನು ಮುಖ್ಯ ಮಂತ್ರಿಯಾದ ಮೇಲೆ ಅನಂತಕುಮಾರ್ ಮನೆಗೆ ಹೋಗಿದ್ದೆ. ಅನಂತಕುಮಾರ್ ಅವರನ್ನ ಕೇಳಿದೆ ಒಂದು ಸಂದಿಗ್ಧ ಕಾಲಘಟ್ಟದಲ್ಲಿ ನಾನು ಈಗ ಮುಖ್ಯಮಂತ್ರಿಯಾಗಿದ್ದೇನೆ. ಹೇಗೆ ನಡೆಸಬೇಕು ಅಂತ ನನಗೆ ಗೊತ್ತಿಲ್ಲ. ನೀವೆಲ್ಲ ಮಾರ್ಗದರ್ಶನ ಮಾಡಬೇಕು ಅಂತ ಹೇಳಿದೆ. ಅನಂತಕುಮಾರ್ ಅವರು ಒಂದು ಮಾತನ್ನು ಹೇಳಿದರು. ಸದಾನಂದಗೌಡರೇ, ನೀವು ಯಾವತ್ತೂ ಮಾನಸಿಕ ಸ್ಥಿಮಿತ ಕಳೆದುಕೊಳ್ಳುವುದಿಲ್ಲ. ಮುಖ್ಯಮಂತ್ರಿಯಾದ ಮೇಲೆ ಮಾನಸಿಕ ಸ್ಥಿಮಿತ ಕಳೆದುಕೊಳ್ಳುವಂಥ ಹೆಚ್ಚು ಹೆಚ್ಚು ಸಂದಿಗ್ಧ ಕಾಲಘಟ್ಟಗಳೂ ಎದುರಾಗಿ ಬರುತ್ತವೆ. ದಯವಿಟ್ಟು ನೀವು ಬೇರೆ ಏನೂ ಮಾಡಬೇಕಾಗಿಲ್ಲ. ಮಾನಸಿಕ ಸ್ಥಿಮಿತ ಕಳೆದುಕೊಳ್ಳದೆ ಸ್ಥಿತಪ್ರಜ್ಞರಾಗಿ ಕೆಲಸ ಮಾಡಿ, ಎಲ್ಲವೂ ನಡೆಯುತ್ತದೆ ಎನ್ನುವಂಥ ಒಂದು ಅದ್ಭುತವಾದ ಸಂದೇಶ ಕೊಟ್ಟರು. . ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಈ ಪ್ರತಿಷ್ಠಾನದ ಬಗೆಗೆ ನನಗೆ ವಿವರಗಳನ್ನು ಕೊಟ್ಟಿದ್ದಾರೆ. ಪ್ರತಿಷ್ಠಾನ ಇವತ್ತು ಎಷ್ಟು ಅವಶ್ಯಕತೆ ಇದೆ ಅಂತ ಹೇಳಿದರೆ ಪ್ರಾಯಶ: ಈ ಪ್ರತಿಷ್ಠಾನ ನಮ್ಮ ರಾಜ್ಯದ ಒಂದು ರಾಜಕೀಯ ಚಿತ್ರವನ್ನೇ ಬದಲಾವಣೆ ಮಾಡಬಲ್ಲದು.

ಪುಟ - 11

## ಕೊರೋನ ಸಂಕಷ್ಟ ಕಾಲದಲ್ಲಿ ಸಂತ್ರಸ್ತರ ನೆರವಿಗೆ ಧಾವಿಸಿದ

# ಅದಮ್ಯ ಚೇತನದ ಧೀರ ಯೋಧರು




ಮಾರ್ಚ್ ೨೦೨೦. ಕೊರೋನಾ ಎಲ್ಲೆಡೆ ಹರಡದಂತೆ ಮುನ್ನೆಚ್ಚರಿಕೆಯಾಗಿ ದೇಶಾದ್ಯಂತ ಲಾಕ್ ಡೌನ್ ಮಾಡಿದ್ದ ಕಾಲ. ಎಲ್ಲರ ಹೆಮ್ಮೆಯ ಸ್ವಯಂಸೇವಾಸಂಸ್ಥೆಯಾದ ಅದಮ್ಯ ಚೇತನದಿಂದ ಏನಾದರೂ ದಿನಸಿ ಪದಾರ್ಥಗಳನ್ನು ಕೊಡಿಸಿ ತಮ್ಮ ದಿನನಿತ್ಯದ ಬದುಕಿಗೆ ಸಹಾಯಮಾಡಬಹುದೇ ಎಂದು ಹಲವರು ನನಗೆ ದೂರವಾಣಿ ಮೂಲಕ ಕೇಳಿದ್ದರು. ಈ ಬೇಡಿಕೆಯ ಬಗೆಗೆ ಶ್ರೀಮತಿ ತೇಜಸ್ವಿನಿಯವರಿಗೆ ತಿಳಿಸಿದಾಗ, ಹಾಗೆ ಕೋರಿಕೆ ಸಲ್ಲಿಸಿದವರ ಹೆಸರು, ವಿಳಾಸ, ದೂರವಾಣಿ ಸಂಖ್ಯೆಗಳನ್ನು ಗುರುತು ಮಾಡಿಕೊಳ್ಳುವುದಲ್ಲದೆ ಸಂಪರ್ಕವ್ಯಕ್ತಿಯಾಗಿಯೂ ಸೇವೆ ಸಲ್ಲಿಸಬಹುದೇ ಎಂದು ಕೇಳಿದರು. ಹೀಗೊಂದು ಕಷ್ಟಕಾಲದಲ್ಲಿ ಸೇವೆ ಸಲ್ಲಿಸುವ ಅವಕಾಶ ದೊರೆತದ್ದಕ್ಕೆ ನನಗೆ ಅಪಾರ ಸಂತಸವಾಯಿತು.

ಅದಮ್ಯಚೇತನದ ಅಧಿಕೃತ ಸಂಪರ್ಕವ್ಯಕ್ತಿಯೆಂದು ನಾನು ಘೋಷಿಸಿಕೊಳ್ಳುವ ಪ್ರಮೇಯವೇ ಬರಲಿಲ್ಲ. ಹಗಲಿರುಳೆನ್ನದೆ ನನ್ನ ದೂರವಾಣಿಗೆ ಬಿಡುವಿಲ್ಲದಂತೆ ಕರೆಗಳು ಬರತೊಡಗಿದವು. ಬನ್ನೇರುಘಟ್ಟದಿಂದ ನೆಲಮಂಗಲದವರೆಗೆ, ಸರ್ಜಾಪುರದಿಂದ ಬಿಡದಿ, ರಾಮನಗರಗಳವರೆಗೆ ಜನರಿಂದ ಆಹಾರಪದಾರ್ಥಗಳಿಗಾಗಿ ಬೇಡಿಕೆಯ ಕರೆಗಳು ನಿರಂತರವಾಗಿ ಬರತೊಡಗಿದವು. ಅದಮ್ಯಚೇತನದ ಭಜನಾತಂಡದವರು, ಹಾಗೂ ಕಲಾವಿದರಲ್ಲಿ ರೇಶನ್ ಕಿಟ್ ಅವಶ್ಯಕತೆಯಿರುವವರನ್ನು ಗಿರಿಜಾ ಅರುಣಕುಮಾರ್, ಗೀತಾ ಗಣೇಶ್ ಮತ್ತು ಲೀಲಾ ಬಸವರಾಜ್ ಸಂಪರ್ಕಿಸಿ ಅವರಿಗೆ ನೆರವು ನೀಡಲು ವ್ಯವಸ್ಥೆ ಮಾಡಿಕೊಟ್ಟರು. ದಿನವೊಂದಕ್ಕೆ ೫೦ ರಿಂದ ೧೦೦ ರೇಶನ್ ಕಿಟ್ ಗಳ ವರೆಗೂ ಬೇಡಿಕೆ ಬರುತ್ತಿತ್ತು. ಅಂದರೆ, ೫೦೦ ರಿಂದ ೧೦೦೦೦ ಕುಟುಂಬಗಳವರೆಗೂ ದಿನಸಿ ಪದಾರ್ಥಗಳನ್ನು ಸರಬರಾಜು ಮಾಡುವ ಏರ್ಪಾಡು ನಡೆದಿತ್ತು. ಸುಮಾರು ೧೧೫ ಜನ ಕಾರ್ಯಕರ್ತರು ತಂತಮ್ಮ ವಾಹನಗಳಲ್ಲೇ ಬಂದು ಸಿದ್ಧ ಆಹಾರವನ್ನು ಪ್ಯಾಕ್ ಮಾಡುವುದು, ರೇಶನ್ ಕಿಟ್ ಗಳನ್ನು ಪ್ಯಾಕ್ ಮಾಡುವುದು, ವಿವಿಧೆಡೆಗಳಿಗೆ ಆಹಾರಸಾಮಗ್ರಿಗಳನ್ನು ಸರಬರಾಜು ಮಾಡುವುದು ಮೊದಲಾದ ಕರ್ತವ್ಯಗಳನ್ನು ಶ್ರದ್ಧೆಯಿಂದ ನಿರ್ವಹಿಸಿದ್ದಾರೆ.

ಬಿಸಿ ಆಹಾರವನ್ನು ಪ್ಯಾಕ್ ಮಾಡುವುದು ಸುಲಭದ ಮಾತಲ್ಲ. ಮುಖಕ್ಕೆ ಮಾಸ್ಕ್, ಕೈಗೆ ಗವಸು. ತಲೆಗೆ ಟೋಪಿ ಇವೆಲ್ಲವುಗಳಿಂದ ಅಲಂಕೃತರಾಗಿ ಬೇಸಗೆಯ ಸೆಕೆಯಲ್ಲಿ ಕೆಲಸ ಮಾಡುವುದೆಂದರೆ ಅಸಾಧಾರಣ ಸಾಹಸವೇ. ಬಿಸಿ ತಾಗಿ ಕೈಗಳಲ್ಲಿ ಬೊಬ್ಬೆ ಏಳುತ್ತಿದ್ದರೂ ಲೆಕ್ಕಿಸದ ಕಾರ್ಯಕರ್ತರ ಮೈಮನಸ್ಸುಗಳಲ್ಲಿ ತುಂಬಿದ ಉತ್ಸಾಹ. ಅದರ ಹಿನ್ನೆಲೆಯಲ್ಲಿ ಹಸಿದವರಿಗಾಗಿ ತಮ್ಮ ಕೈಲಾದ ಸೇವೆ ಮಾಡಬೇಕೆನ್ನುವ ದೃಢ ಸಂಕಲ್ಪ.

ಪ್ರತಿನಿತ್ಯ ಸಾವಿರಾರು ರೇಶನ್ ಕಿಟ್ ಗಳ ಜೊತೆಗೆ ಸಾವಿರಾರು ಜನರಿಗೆ ಬಿಸಿಯೂಟವನ್ನೂ ಕಳುಹಿಸಲಾಗುತ್ತಿತ್ತು. ರೇಷನ್ ಕಿಟ್ ಗಳನ್ನು ಸಿದ್ಧಪಡಿಸುವ ಹೊಣೆಯನ್ನು ಶ್ರೀ ವಿಶ್ವೇಶ್ವರ ರವರ ನೇತೃತ್ವದಲ್ಲಿ ಮೈಲಾರೇಶ್ವರ ಟ್ರಸ್ಟ್ ಸದಸ್ಯರು ನಿರ್ವಹಿಸಿದರು. ಹೀಗೆ ಬಿಸಿಯೂಟವನ್ನು ಪಡೆಯುತ್ತಿದ್ದವರ ಸಂಖ್ಯೆ ಹನ್ನೆರಡು ಸಾವಿರದಿಂದ ೨೩,೦೦೦ದವರೆಗೂ ವಿಸ್ತರಿಸಿತ್ತು.

ಪುಟ -8







# Donors for a Noble Cause

Times like the one created by Corona is tough to believe or handle. But when like minded philanthropists and service minded institutions join hands together, wonders work. This is what happened at Adamya Chetana. When the whole world was in pain and grief and was in a silent shock mode not knowing what to do, Adamya Chethana rose up to the occasion trying to make life and livelihood a little better. With an enthusiastic group of volunteers and big hearted donor community showing trust in strengthening our hands, the thought of what AnanthKumar ji would do in such a situation of a pandemic hitting the nation, motivated us to take the situation head-on. We at Adamya Chetana were not ready to sit quiet and watch helplessly. Our chairperson Dr Tejaswini AnanthKumar and team took on the steering and started working towards supporting the needy while keeping the health of every staff member and volunteer as the top most priority. With guidance from our trustee Shri HNA Prasad, the steam boiler was made operational. Today, ACF is proud to have cooked and delivered more than 7,00,000 meal packets in around 50 days without a break and distributed close to 25000 grocery kits which equals to 1.75 lakh kilos of grocery.

This journey is indeed a learning which said and reminded us - sky is the limit. I am extremely grateful to our team of volunteers who relentlessly showed up everyday with no break of a Sunday or a May Day. The Mask, the Gloves and the caps to maintain hygiene and the social distancing have now become their habit. Our heartfelt gratitude to our donors whose generosity helped a lot of people in need. We wish god gives us strength to help the needy and pray for a long healthy life to our donors and volunteers.

We like to thank :

**WIPRO Foundation, Dept. of Labor and Information & Broadcasting - Govt of Karnataka Youth for Seva Bank of Baroda Hindustan Petroleum Corporation Ltd Gas Authority of India Ltd Sangeetha Mobiles Yashaswi Trust Adarsh Group of Institutions BNM Institute of Technology Vagdevi Vilas Group of Institutions Nestle India Sri Guruprasad Sri Anand Bhat, BNB Securities Smt Sowmya Laxmi Sri Manish Mundra Sri D R Subramanyam Smt Meera Phadke Sri Rajagopal Madhusudhan Dr H S Nagaraj Dr Sunitha Commodore C D Balaji Padmavibhushan Scientist Dr V K Atre family Trust Smt Ambuja Narayan Swasthi Foundation Sri Mohit Kumar Singhal Smt. Nagarathna Niranjan Sri.Manish Dubey Sri.H.M.Venkatesh Precision Components Antares Systems Pvt Ltd Sri Nagaraj Dixit Athree Developers Bellur Krishnamachar & Sheshamma Smaraka Nidhi Trust, Kolar Sri Sesha Prasad Narahari Shilpa Enterprises Sri.M.K.Subramanya Sri Ramesh Sri Venkatesh C Sri Ganapati Sachchidananda Gnana Bodha Sabha Trust Dr.Narasapur, Vijayapur Sri Arun Goudar Smt.Ramadevi Smt.Savithri Shri.Raghunandan K.C.**



**Pradeep Oak**
Trustee
Adamya Chetana Foundation
(www.adamyachetana.org)

# ಉಪ್ಪಿಟ್ಟಿನ ಮಹಾತ್ಮೆ

ಅನಂತಕುಮಾರರಿಗೆ ಬಹುವರ್ಷಗಳಿಂದಲೂ ತಮ್ಮ ತಾಯಿತಂದೆಯವರನ್ನು ವಿದೇಶಪ್ರವಾಸಕ್ಕೆ ಕರೆದೊಯ್ಯಬೇಕೆಂಬ ಬಯಕೆಯಿತ್ತು. ತಮ್ಮ ಮಗನ ಬಯಕೆ ಕೈಗೂಡುವ ಮುನ್ನವೇ ಗಿರಿಜಾಶಾಸ್ತ್ರಿಯವರು ನಿಧನರಾದರು. ೧೯೯೭ರ ವೇಳೆಗೆ ಅನಂತಕುಮಾರರು ಪಾರ್ಲಿಮೆಂಟರಿ ಸಮಿತಿಯ ಸದಸ್ಯರಾಗಿ ಅಮೆರಿಕಾ ಪ್ರವಾಸ ಕೈಗೊಳ್ಳಲಿದ್ದರು. ಇಪ್ಪತ್ತೈದು ದಿನಗಳ ಅವರ ಅಧಿಕೃತ ಪ್ರವಾಸ ಮುಗಿಯುವ ಹೊತ್ತಿಗೆ ಶಾಸ್ತ್ರಿಯವರನ್ನು ಕರೆದುಕೊಂಡು ಶ್ರೀಮತಿ ತೇಜಸ್ವಿನಿಯವರು ಅಮೆರಿಕಾ ತಲುಪಿದರು. ಈ ಪ್ರವಾಸದ ಪ್ರಾರಂಭದಲ್ಲಿ ಮಿತ್ರರೊಬ್ಬರ ಮನೆಗೆ ಭೇಟಿನೀಡಿದಾಗ ಅವರ ಪತ್ನಿ ವಿವಿಧ ಪ್ರವಾಸಿಸ್ಥಳಗಳಲ್ಲಿ ಸಸ್ಯಾಹಾರಿಗಳಿಗೆ ಕಾಡುವ ಆಹಾರದ ಸಮಸ್ಯೆಯ ಬಗೆಗೆ ವಿವರಿಸಿ ಅದಕ್ಕೊಂದು ಪರಿಹಾರವನ್ನೂ ಹೇಳಿಕೊಟ್ಟರು. ಬಿಸಿನೀರಿಗೆ ಹಾಕಿ ತತ್ ಕ್ಷಣವೇ ತಯಾರಿಸಬಹುದಾದ ಉಪ್ಪಿಟ್ಟು ಇಲ್ಲವೇ ಅವಲಕ್ಕಿಯ ಮಿಶ್ರಣವನ್ನು ಸಿದ್ಧಪಡಿಸುವ ಬಗೆ ಹೇಗೆಂದು ತೇಜಸ್ವಿನಿಯವರಿಗೆ ಪಾಠವೂ ಆಯಿತು. ಮುಂದೆ ೨೦೧೨ರಲ್ಲಿ ವಿಶ್ವಸಂಸ್ಥೆಯಲ್ಲಿ ಭಾಷಣ ಮಾಡುವ ಸಲುವಾಗಿ ಅನಂತಕುಮಾರ್ ಅಮೆರಿಕೆಗೆ ಭೇಟಿಕೊಟ್ಟಾಗ ಅವರೊಡನೆ ತೇಜಸ್ವಿನಿಯೂ ಹೋಗಿದ್ದರು.ಅನಂತಕುಮಾರರಿಗೆ ವಿದೇಶಿ ಬ್ರೆಡ್ಡು ಪಿಜ್ಜಾಗಳೆಂದರೆ ಅಷ್ಟಕ್ಕಷ್ಟೆ. ಆದರೆ, ಈ ಅವಧಿಯಲ್ಲಿ ಉಪಾಹಾರದ ವ್ಯವಸ್ಥೆಗೇನು ಮಾಡುವುದೆಂದು ತೇಜಸ್ವಿನಿ ಚಿಂತಿಸಬೇಕಾಗಿ ಬರಲಿಲ್ಲ. ಬೆಂಗಳೂರಿನಿಂದಲೇ ಹದಿನೈದು ದಿನಗಳಿಗೆ ಸಾಕಾಗುವಷ್ಟು ಉಪ್ಪಿಟ್ಟಿನ ರೆಡಿಮೇಡ್ ಮಿಶ್ರಣವನ್ನು ತೆಗೆದುಕೊಂಡು ಹೋಗಿದ್ದರು. ಹೋಟೆಲಿನ ಕೊಠಡಿಯಲ್ಲಿ ಬಿಸಿನೀರಿಗೆ ಮಿಶ್ರಣಹಾಕಿ ಆಗಿಂದಾಗಲೇ ಸಿದ್ಧಪಡಿಸಿದ ಉಪ್ಪಿಟ್ಟಿನ ಸಮಾರಾಧನೆ ಹದಿನೈದು ದಿನಗಳವರೆಗೂ ನಿರಂತರವಾಗಿ ಮುಂದುವರೆದರೂ ಅನಂತಕುಮಾರರಿಗೆ ಬೇಸರವೇನೂ ಆಗಲಿಲ್ಲ. ಮನೆಯ ತಿಂಡಿ ತಿನ್ನುವ ಸಂತೋಷವನ್ನು ಬ್ರೆಡ್ಡುಬನ್ನುಗಳಲ್ಲಿ ಕಾಣಲು ಸಾಧ್ಯವೇ?

ಈ ದಿಢೀರ್ ಉಪ್ಪಿಟ್ಟಿನ ಪ್ರಯೋಗ ಇತ್ತೀಚಿನ ಕೋವಿಡ್ ಅವ್ಯವಸ್ಥೆಯ ಕಾಲದಲ್ಲೂ ಯಶಸ್ವಿಯಾಗಿ ಪ್ರಯೋಜನಕ್ಕೆ ಒದಗಿತು. ಸಂತ್ರಸ್ತರಿಗೆ ಬರಿಯ ದಿನಸಿ ಪದಾರ್ಥಗಳ ವಿತರಣೆಯಾದರೆ ಸಾಲದು. ಅವನ್ನು ಇತರ ಪರಿಕರಗಳೊಡನೆ ಬೇಯಿಸಿ ಅಡುಗೆ ಮಾಡುವುದಕ್ಕೇ ಸಾಕಷ್ಟು ಹೊತ್ತು ಹಿಡಿಯುತ್ತದೆ. ಅವಕ್ಕೆ ಬೇಕಾಗುವ ಪಾತ್ರೆಪಡಗಗಳೂ ಇರದಿದ್ದರೆ ಪದಾರ್ಥವಿದ್ದೂ ಪ್ರಯೋಜನವಿಲ್ಲದಂತೆ. ಹಾಗಾಗಿ ಇತರ ದಿನಸಿ ಪದಾರ್ಥಗಳೊಡನೆ , ತತ್ಕ್ಷಣ ತಯಾರಿಸಬಹುದಾದ ಉಪ್ಪಿಟ್ಟಿನ ಮಿಶ್ರಣವಿರುವ ಪೊಟ್ಟಣಗಳನ್ನೂ ವಿತರಣೆಮಾಡಬಹುದೆಂದು ತೇಜಸ್ವಿನಿಯವರು ಯೋಚಿಸಿದರು. ಈ ವಿತರಣೆ ಅತ್ಯಂತ ಸಮರ್ಪಕವೂ ಸಮಯೋಚಿತವೂ ಆಗಿ ಪರಿಣಮಿಸಿತು. ಹೆಚ್ಚಿನ ಪಾಕವಿಧಾನದ ರೇಜಿಗೆಯಿಲ್ಲದೆ ಸುಲಭದಲ್ಲಿ ತಯಾರಿಸಬಹುದಾದ ಆಹಾರವು ಲಭ್ಯವಾದುದರಿಂದ ಸಂತ್ರಸ್ತರೆಲ್ಲರೂ ಸಂತೋಷಪಡುವಂತಾಯಿತು.




ಪುಟ -6 ರಿಂದ

ಹೀಗೆ ಊಟ ಪಡೆಯುತ್ತಿದ್ದವರಲ್ಲಿ ಕೋವಿಡ್ ನಿಯಂತ್ರಣಕ್ಕಾಗಿ ನಿರಂತರ ಶ್ರಮಿಸುತ್ತಿದ್ದ ಡಾಕ್ಟರುಗಳು, ಆಸ್ಪತ್ರೆಯ ಸಹಾಯಕ ಸಿಬ್ಬಂದಿ, ಪೋಲೀಸ್ ಇಲಾಖೆಯ ಸಿಬ್ಬಂದಿ, ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಸಿಬ್ಬಂದಿಯವರೂ ಸೇರಿದ್ದರು. ಇವರಿಗೆಲ್ಲ ಪ್ರತಿದಿನ ಸಮಯಕ್ಕೆ ಸರಿಯಾಗಿ ಊಟದ ವ್ಯವಸ್ಥೆ ಮಾಡುವಲ್ಲಿ ಅದಮ್ಯ ಚೇತನ ವಹಿಸಿದ ಪಾತ್ರ ಶ್ಲಾಘನೀಯ.

ಮಾರನೆಯ ದಿನ ಎಲ್ಲೆಲ್ಲಿಗೆ ಎಷ್ಟು ಊಟ ಕಳುಹಿಸಬೇಕೆಂಬುದು ಬೇಡಿಕೆಗೆ ಅನುಸಾರವಾಗಿ ಹಿಂದಿನ ದಿನವೇ ತೀರ್ಮಾನವಾಗಬೇಕು. ಪ್ರತಿ ನಿತ್ಯ ಎಷ್ಟು ಕಿಟ್ ಗಳನ್ನು ಸಿದ್ಧಪಡಿಸಬೇಕು ಮತ್ತು ಎಷ್ಟು ಜನರಿಗೆ ಆಹಾರದ ವ್ಯವಸ್ಥೆ ಮಾಡಬೇಕು ಎನ್ನುವುದರ ಪೂರ್ವ ಮಾಹಿತಿಯನ್ನು ಶ್ರೀ ಪ್ರದೀಪ್ ಓಕ್ ವಿವಿಧ ಕಾರ್ಯಕರ್ತರಿಂದ ಪಡೆದುಕೊಳ್ಳುತ್ತಿದ್ದರು. ಶ್ರೀ ಪ್ರದೀಪ್ ಓಕ್ ಅವರು ಈ ಸಮಗ್ರ ಕಾರ್ಯಕ್ರಮದ ಸೂತ್ರಧಾರರಂತೆ ಕಾರ್ಯನಿರ್ವಹಿಸುತ್ತಿದ್ದರು.

ನಿಗದಿತ ಪಟ್ಟಿಗನುಗುಣವಾಗಿ ಆಹಾರ ಸಿದ್ಧವಾಗುವುದನ್ನು ಶ್ರೇಯಾ ರಾವ್, ವೇಣುಗೋಪಾಲ್ , ಮಹಾಂತೇಶ್, ಪ್ರಕಾಶ್ ತಂಡದವರು ವಿವಿಧ ಕಾರ್ಯಕರ್ತೆಯರು, ಚಾಲಕರು ಮತ್ತು ಅದಮ್ಯಚೇತನದ ಸಿಬ್ಬಂದಿ ನೋಡಿಕೊಳ್ಳುವರು. ಶಾರದಾ ಪ್ರಕಾಶ್ ದಂಪತಿಯಂತೂ ಬೆಳಗಿನ ಏಳು ಗಂಟೆಗೇ ಅದಮ್ಯ ಚೇತನದಲ್ಲಿ ಹಾಜರು. ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಪ್ಯಾಕಿಂಗ್ ಮಾಡಲು ಕುಳಿತುಕೊಳ್ಳುವ ವ್ಯವಸ್ಥೆಯಿಂದ ಮೊದಲುಗೊಂಡು ಪ್ಯಾಕ್ ಮಾಡಿ ಆಯಾ ಸ್ಥಳಗಳಿಗೆ ವಾಹನಗಳ ಮೂಲಕ ಕಳುಹಿಸಿ ಮರುದಿನಕ್ಕೆ ಬೇಕಾಗುವ ವ್ಯವಸ್ಥೆಯನ್ನು ನಿರ್ಣಯಿಸಿ ಎಲ್ಲವೂ ಸಮರ್ಪಕವಾಗಿದೆ ಎಂದು ಒಪ್ಪುವವರೆಗೆ ಶಾರದಾ ಮತ್ತು ಪ್ರಕಾಶ್ ವಿರಮಿಸುವುದೇ ಇಲ್ಲ. ಶ್ರೀಮತಿ ಯಮುನಾ, ಸುಭದ್ರಾ, ತಮ್ಮ ಪತಿ ಮತ್ತು ಮಗಳು ಕಾವ್ಯಳೊಡನೆ ದಿನವಿಡೀ ಕಾರ್ಯತತ್ಪರರಾಗಿರುವ ಶ್ರೀಮತಿ ಸುಜಾತ, ಶ್ರೀಮತಿ ಮೀನಾ ಹಾಗೂ ಅವರ ಶಾಲೆಯ ಸಿಬ್ಬಂದಿ ಮೊದಲಾದವರ ಸೇವೆಯನ್ನು ಮರೆಯುವಂತೆಯೇ ಇಲ್ಲ. ಈ ಸಂಬಂಧದ ಎಲ್ಲ ಖರೀದಿಗಳನ್ನೂ ಜಿ ಎ ನಾಗೇಂದ್ರ ಮರಾಡಿಯ, ಶ್ರೀಮತಿ ವಾಣಿಯವರು ನಿರ್ವಹಿಸಿದರು

ಆಯಾ ಪ್ರದೇಶಗಳಿಗೇ ವಾಹನಗಳಲ್ಲಿ ಹೋಗಿ ಕೋವಿಡ್ ಭೀತಿಯನ್ನು ಲೆಕ್ಕಿಸದೆ ಜನರನ್ನು ಸಂಪರ್ಕಿಸಿ ಸಾಮಾಜಿಕ ಅಂತರವನ್ನು ಕಲ್ಪಿಸಿ ಅವರಿಗೆ ಆಹಾರ ಪದಾರ್ಥಗಳನ್ನೂ ಬಿಸಿಯೂಟವನ್ನೂ ತಲುಪಿಸಿ ಬರುವ ಜವಾಬ್ದಾರಿಯನ್ನು ನಿರ್ವಹಿಸಿದ ಧೀರ ಕಾರ್ಯಪಡೆಯ ಸೇವೆ ಸ್ಮರಣಾರ್ಹ. ಶ್ರೀಯುತರಾದ ಶ್ರೀಕಾಂತ್, ಜನಾರ್ದನ ತುಂಗ, ರಾಘವೇಂದ್ರ, ಸುಬ್ರಹ್ಮಣ್ಯ, ರಮೇಶ್, ಮಹೇಶ್, ಕಿರಣ್ ಶಾಸ್ತ್ರಿ, ಸಂತೋಷ್ ನಾರಾಯಣ್, ಸಂತೋಷ್ ಭಟ್ , ಮಂಜುನಾಥ ಹಾಗೂ ಯೂಥ್ ಫಾರ್ ಸೇವಾ ಕಾರ್ಯಕರ್ತರು ಮೊದಲಾದವರು ಬೆಂಗಳೂರಿನ ಮೂಲೆಮೂಲೆಗಳಲ್ಲಿ ತಿರುಗಿ ಆಹಾರಪದಾರ್ಥಗಳನ್ನು ತಲುಪಿಸುವ ಹೊಣೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಸುಮಾರು ಇಪ್ಪತ್ತೇಳು ಸಾವಿರ ಕಿಟ್ಟಳ ವಿತರಣೆಯ ಜೊತೆಗೆ ಎಂಟೂವರೆ ಲಕ್ಷದಷ್ಟು ಬಿಸಿಯೂಟದ ವಿತರಣೆ ಮಾಡಲಾಗಿದೆಯೆಂದರೆ ಈ ಕಾರ್ಯಕ್ರಮದ ವ್ಯಾಪ್ತಿ, ಪರಿಶ್ರಮದ ಅಗಾಧತೆ, ಕಾರ್ಯಕರ್ತರ ಶ್ರದ್ಧಾಪೂರ್ವಕ ದುಡಿಮೆಯ ಮಹತ್ತು ಅರಿವಿಗೆ ಬಾರದಿರುವುದಿಲ್ಲ.

ವಿವಿಧ ಸಂಘಸಂಸ್ಥೆಗಳಿಂದಲೂ ಉದ್ಯಮಗಳಿಂದಲೂ ಕೆಲಸದ ಬಿಡುವಿನಲ್ಲಿ ಸ್ವಯಂಸೇವಕರಾಗಿ ದುಡಿಯಲು ಬಂದವರ ಸಂಖ್ಯೆಯೂ ಕಡಿಮೆಯೇನಲ್ಲ. ಹಾಗೆ ಸ್ವಯಂ ಸೇವಕರಾಗಿ ಬಂದ ಶ್ರೀ ರಾಜಾರಾಮ್ ಭಟ್ ತಮ್ಮ ಕಾರ್ಯಪರತೆ, ಶ್ರದ್ಧೆಗಳಿಂದ ಎಲ್ಲರ ಮೆಚ್ಚುಗೆಗೆ ಪಾತ್ರರಾದರಲ್ಲದೆ, ಸಂಸ್ಥೆಯ ಇತರ ಚಟುವಟಿಕೆಗಳಲ್ಲೂ ಆಸಕ್ತಿಯಿಂದ ತಮ್ಮ ಸೇವೆಯನ್ನು ಮುಂದುವರಿಸಿದ್ದಾರೆ.
ಅದಮ್ಯ ಚೇತನದ ಈ ಮಹತ್ಸೇವೆಗೆ ಕೈಜೋಡಿಸಿದವರಲ್ಲಿ ಅನೇಕ ದಾನಿಗಳಿದ್ದಾರೆ. ಅಂತಹ ದಾನಿಗಳಲ್ಲಿ ಹಲವರು ಅಜ್ಞಾತರಾಗಿಯೇ ಉಳಿಯಬಯಸಿದ್ದಾರೆ. ಜಯನಗರದಲ್ಲಿ ಕೂಲಿಕಾರರಿಗೆ ರೇಶನ್ ಕಿಟ್ ವಿತರಿಸುವುದನ್ನು ಕಂಡ ವಯೋವೃದ್ಧ ಮಾತೆಯೊಬ್ಬರು ಇಷ್ಟು ಒಳ್ಳೆಯ ಕೆಲಸಕ್ಕೆ ನಮ್ಮದೂ ಕಿಂಚಿತ್ ಕಾಣಿಕೆಯಿರಲಿ, ನಿಮ್ಮ ಅಕೌಂಟಿಗೆ ಹಣ ಹಾಕುವುದು ಗೊತ್ತಿಲ್ಲ ಇದೋ ಚೆಕ್ ತೆಗೆದುಕೊಳ್ಳಿ ಎಂದ ಔದಾರ್ಯವು ಸಮಾಜದ ಶ್ರೀಮಂತ ಮನೋಭಾವಕ್ಕೆ ಸಾಕ್ಷಿ.



**-ಶ್ರೀಲಕ್ಷ್ಮಿ ವಿಶ್ವನಾಥ್**
ಕಾರ್ಯಕರ್ತೆ - ಅದಮ್ಯ ಚೇತನ

# ಅದಮ್ಯ ಚೇತನ - ಅನುಪಮ ಸೇವೆ

ಮಾನವ ಜನಾಂಗ ನಿಯತಕಾಲಿಕವಾಗಿ ಅನೇಕ ಪ್ರಕೃತಿ ವಿಕೋಪಗಳನ್ನು ಎದುರಿಸುತ್ತ ಬಂದಿದೆ. ಬರಗಾಲ, ಪ್ರವಾಹ, ಭೂಕಂಪ, ಚಂಡಮಾರುತ, ಸುನಾಮಿ, ಸಾಂಕ್ರಾಮಿಕ ರೋಗ, ಒಂದೇ ಎರಡೇ? ಮಾನವ ಈ ಎಲ್ಲ ಸವಾಲುಗಳನ್ನು ಎದುರಿಸಿ ಗೆದ್ದಿದ್ದಾನೆ. ಈ ಯಾವ ಸವಾಲುಗಳನ್ನೂ ಮಾನವ ಏಕಾಕಿಯಾಗಿ ಗೆಲ್ಲಲಿಲ್ಲ. ಆತ ಸಂಘ ಜೀವಿಯಾಗಿರುವುರಿಂದಲೇ ಇದು ಸಾಧ್ಯವಾಯಿತು. ಪ್ರಕೃತಿವಿಕೋಪಗಳ ಸಂದರ್ಭದಲ್ಲಿ ಪ್ರತಿಯೊಬ್ಬ ಮಾನವನಲ್ಲಿಯೂ ಇರುವ ದೈವೀಗುಣವಾದ ಭೂತದಯೆಯು ಜಾಗೃತವಾಗಿ ಪ್ರತಿಯೊಬ್ಬರೂ ತಾವು ಸಮಾಜಜೀವಿ ಎಂದು ನೆನಪಿಸಿಕೊಂಡು ಕಾರ್ಯೋನ್ಮುಖರಾಗುವುದೂ ಪ್ರಕೃತಿ ಸಹಜವೇ.

ವಿದ್ಯಾರ್ಥಿಜೀವನದಿಂದಲೇ ಉದಾತ್ತ ಗುಣಗಳನ್ನು ಮೈಗೂಡಿಸಿಕೊಂಡಿದ್ದ ಶ್ರೀಮತಿ ತೇಜಸ್ವಿನಿಯವರು ಕರ್ನಾಟಕದ ಶ್ರೇಷ್ಠ ರಾಜಕಾರಣಿಗಳಲ್ಲಿ ಒಬ್ಬರಾದ ದಿವಂಗತ ಅನಂತಕುಮಾರರನ್ನು ಮದುವೆಯಾದ ಮೇಲೆ ಅದಮ್ಯ ಚೇತನ ಸಂಸ್ಥೆಯನ್ನು ಕಟ್ಟಿ ಬೆಳೆಸಿ ಅನ್ನ ಅಕ್ಷರ ದಾಸೋಹವನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಅದಮ್ಯ ಚೇತನ ಸಂಸ್ಥೆಯವರು ನಡೆಸುವ ಹಸಿರು ಭಾನುವಾರ ಕಾರ್ಯಕ್ರಮಗಳನ್ನು ನಾನು ನಿರಂತರವಾಗಿ ಗಮನಿಸುತಿದ್ದೆ. ಶ್ರೀಮತಿ ತೇಜಸ್ವಿನಿಯವರ ಪರಿಸರ ಕಾಳಜಿ ಅನನ್ಯವಾದುದು.

ನನಗೆ ಪರಿಚಯವಿರುವ, ಅದಮ್ಯ ಚೇತನ ಸಂಸ್ಥೆಯ ನಿಷ್ಠಾವಂತ ಸ್ವಯಂ ಸೇವಕರಾಗಿರುವ ಶ್ರೀ ಶ್ರೀಕಾಂತ್ ಏಪ್ರಿಲ್ ಹದಿನಾಲ್ಕರಂದು ಮನೆಗೆ ಬಂದಿದ್ದರು. ಅವರ ಹತ್ತಿರ ಮಾತನಾಡುತ್ತಿರುವಾಗ ಅದಮ್ಯ ಚೇತನ ಸಂಸ್ಥೆಯು ಕೈಗೊಂಡಿರುವ ಪರಿಹಾರ ಕಾರ್ಯಗಳ ಕುರಿತು ವಿವರಿಸುತ್ತಿದ್ದರು. ಆಗ ಅವರಿಗೆ ನಾನೂ ಸ್ವಯಂಸೇವಕನಾಗಿ ಅವರ ಜೊತೆಗೂಡುವ ಅಪೇಕ್ಷೆಯನ್ನು ವ್ಯಕ್ತಪಡಿಸಿದೆ. ಜೊತೆಗೆ ನನ್ನ ಕಾರನ್ನು ಪರಿಹಾರ ಕಾರ್ಯಗಳಿಗೆ ಬಳಸಿಕೊಳ್ಳಬಹುದು ಎಂದು ಸೂಚಿಸಿದೆ. ನನ್ನಿಂದ ಎರಡು ಫೋಟೋ, ಮತ್ತು ಆಧಾರ್ ಕಾರ್ಡ್ ಹಾಗೂ ಕಾರಿನ ನೋಂದಣಿ ಕಾರ್ಡುಗಳ ನಕಲು ಪ್ರತಿಗಳನ್ನು ಸಂಗ್ರಹಿಸಿದ ಶ್ರೀಕಾಂತ್ ಲಾಕೌನ್ ಸಮಯದಲ್ಲಿ ಬೆಂಗಳೂರಿನಾದ್ಯಂತ ಸಂಚರಿಸಲು ಅಗತ್ಯವಿರುವ ಪೋಲೀಸ್ ಪರವಾನಗಿಯನ್ನು ಒದಗಿಸಿ ಕೊಟ್ಟರು. ಅಲ್ಲಿಂದ ಸುಮಾರು ಒಂದೂವರೆ ತಿಂಗಳ ಕಾಲ ಅದಮ್ಯ ಚೇತನ ಸಂಸ್ಥೆಯು ಕೈಗೊಂಡಿದ್ದ ಆಹಾರದ ಪೊಟ್ಟಣಗಳನ್ನು ಅಗತ್ಯವಿರುವ ಜನರಿಗೆ ತಲುಪಿಸುವ ಕೆಲಸದಲ್ಲಿ ಭಾಗಿಯಾಗುವ ಅಪೂರ್ವ ಅವಕಾಶ ನನಗೆ ಲಭ್ಯವಾಯಿತು.

ಈ ಮಹತ್ಕಾರ್ಯಕ್ಕಾಗಿ ಸಂಸ್ಥೆಯು ತನ್ನ ಗವಿಪುರದ ಕಛೇರಿಯ ಎದುರಿಗಿದ್ದ ಧೋಂಡೂಸಾ ಛತ್ರವನ್ನು ಬಳಸಿಕೊಳ್ಳುತ್ತಿತ್ತು. ಅದರಲ್ಲಿ ಪ್ರತಿದಿನ ಸಾವಿರಾರು ಆಹಾರದ ಕಿಟ್ ಗಳನ್ನು ತಯಾರಿಸುವುದರಲ್ಲಿ ಹತ್ತಾರು ಜನ ಸ್ವಯಂಸೇವಕರು ನಿರತರಾಗಿದ್ದರು. ಇವರಲ್ಲಿ ಮಹಿಳೆಯರೇ ಅಧಿಕ ಸಂಖ್ಯೆಯಲ್ಲಿದ್ದುದು ವಿಶೇಷ. ಈ ಸ್ವಯಂಸೇವಕರು ಸಿದ್ಧಪಡಿಸಿದ ಪೊಟ್ಟಣಗಳನ್ನು ಫಲಾನುಭವಿಗಳಿಗೆ ತಲುಪಿಸುವ ಕೆಲಸ ನಮ್ಮದು.

ಈ ಪೊಟ್ಟಣಗಳಲ್ಲಿ ಅಕ್ಕಿ, ಬೇಳೆ, ಗೋಧಿ ಹಿಟ್ಟು, ರೆಡಿಮೇಡ್ ಉಪ್ಪಿಟ್ಟು ಮಿಕ್ಸ್, ಎಣ್ಣೆ, ಜೊತೆಗೆ ಒಂದು ಹತ್ತಿಯ ಕೈಚೀಲ ಇರುತ್ತಿದ್ದವು. ಮಧ್ಯಾಹ್ನ ಸುಮಾರು ನಾಲ್ಕು ಗಂಟೆಯ ಹೊತ್ತಿಗೆ ನಮ್ಮ ಕಾರಿನಲ್ಲಿ ಮತ್ತು ಇನ್ನೊಂದು ಟೆಂಪೋದಲ್ಲಿ ಈ ಸಾಮಗ್ರಿಗಳನ್ನು ತುಂಬಿಸಿಕೊಂಡು ಬೆಂಗಳೂರಿನ ಮೂಲೆ ಮೂಲೆಗಳಿಗೆ ಹೊರಡುತ್ತಿದ್ದವು. ಬನ್ನೇರುಘಟ್ಟ, ಹಕ್ಕಿಪಿಕ್ಕಿ ಕಾಲೋನಿ, ಅಕ್ಷಯನಗರ, ಕೋಣನಕುಂಟೆ, ಅಮೃತನಗರ, ಗುಬ್ಬಲಾಳ, ಚುಂಚಘಟ್ಟ, ಉತ್ತರಹಳ್ಳಿ, ಉಲ್ಲಾಳ, ರಾಜಾಜಿನಗರ, ರಾಮಮೂರ್ತಿನಗರ, ಮುನಿರೆಡ್ಡಿಪಾಳ್ಯ, ಮಾರತ್ತಹಳ್ಳಿ, ಕೋರಮಂಗಲ, ಆನೆಪಾಳ್ಯ, ಮಂಗಮ್ಮನಪಾಳ್ಯ, ಬೊಮ್ಮನಹಳ್ಳಿ, ಬೇಗೂರು ........ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಇದು ನಮ್ಮ ಒಂದು ತಂಡ ಕೆಲಸ ಮಾಡಿದ ಸ್ಥಳಗಳು. ಇಂತಹ ಅನೇಕ ತಂಡಗಳಿದ್ದವು.

ಅದಮ್ಯ ಚೇತನ ಸಂಸ್ಥೆಯು ಆಯ್ಕೆ ಮಾಡಿದ ಫಲಾನುಭವಿಗಳ ಹಿನ್ನೆಲೆಯೂ ವೈವಿಧ್ಯಮಯವಾಗಿತ್ತು. ಆನೆಪಾಳ್ಯದ ಮುಸ್ಲಿಂ ಮಹಿಳೆಯರು, ಮಂಗಮ್ಮನ ಪಾಳ್ಯದ ನಾಗಾಲ್ಯಾಂಡಿನ ಜನರು, ಕೋರಮಂಗಲದ ಉತ್ತರಪ್ರದೇಶದ ಕೂಲಿಕಾರ್ಮಿಕರು, ಉತ್ತರಹಳ್ಳಿ, ಉಲ್ಲಾಳಗಳ ಅರ್ಚಕರು, ಮಾರತ್ತಹಳ್ಳಿಯ ಕಟ್ಟಡ ಕಾರ್ಮಿಕರು, ಬನ್ನೇರುಘಟ್ಟದ ಹರಿಜನ ಗಿರಿಜನರು, ಹಕ್ಕಿಪಿಕ್ಕಿಗಳು, ಅಂಗವಿಕಲರು, ವೃದ್ಧಾಶ್ರಮವಾಸಿಗಳು, ಕೋಣನಕುಂಟೆಯ ಮನೆಗೆಲಸದ ಮಹಿಳೆಯರು, ಅಕ್ಷಯನಗರದ ಒರಿಸ್ಸಾ ದೇಶದ ವಲಸಿಗರು, ಹೀಗೆ ವೈವಿಧ್ಯಮಯ ಹಿನ್ನೆಲೆಯ ಜನರನ್ನು ಬಹಳ ಜಾಗರೂಕತೆ ವಹಿಸಿ ಆಯ್ಕೆ ಮಾಡಿದ ತಂಡದ ಕೆಲಸವನ್ನು ಎಷ್ಟು ಹೊಗಳಿದರೂ ಸಾಲದು. ನಿಜವಾದ ಅಗತ್ಯವಿರುವ ಇಂತಹ ಜನರಿಗೆ ನೆರವನ್ನು ತಲುಪಿಸಿದ ನಮ್ಮಲ್ಲಿಯೂ ಧನ್ಯತೆಯ ಭಾವ ಮೂಡಿದ್ದು ಸುಳ್ಳಲ್ಲ. ಇಂತಹ ಅಪರೂಪದ ಅವಕಾಶವನ್ನು ಒದಗಿಸಿಕೊಟ್ಟ ಅದಮ್ಯ ಚೇತನಕ್ಕೆ ತುಂಬು ಹೃದಯದ ಧನ್ಯವಾದಗಳು ಸಲ್ಲುತ್ತವೆ.

ಫಲಾನುಭವಿಗಳ ಆಯ್ಕೆಯ ಕ್ಷಮತೆ ಒಂದು ಕಡೆಗಾದರೆ ಸರಕಾರದ ಎಲ್ಲ ಮಾರ್ಗದರ್ಶಿ ಸೂತ್ರಗಳನ್ನು ನಿಷ್ಠೆಯಿಂದ ಅನುಸರಿಸುವ ಶ್ರದ್ಧೆಯೂ ಗಮನಾರ್ಹವಾಗಿತ್ತು. ಅತ್ಯಂತ ಶುಚಿಯಾದ ಧೋಂಡೂಸಾ ಛತ್ರದ ಪರಿಸರ, ಮುಖಕ್ಕೆ ಮಾಸ್ಕ್, ಕೈಗಳಿಗೆ ಗವಸುಗಳು, ಸ್ವಯಂಸೇವಕರ ನಡುವೆ ಸಾಮಾಜಿಕ ಅಂತರ, ಛತ್ರದಲ್ಲಿ ಮಾತ್ರವಲ್ಲದೆ, ವಿತರಣೆಯ ಜವಾಬ್ದಾರಿ ಹೊತ್ತವರಿಗೂ ಸ್ಯಾನಿಟೈಸರ್ ವ್ಯವಸ್ಥೆ – ಒಂದು ಜವಾಬ್ದಾರಿಯುತ ಮಾದರಿ ಸ್ವಯಂ ಸೇವಾ ಸಂಸ್ಥೆಯಾಗಿ ಅದಮ್ಯ ಚೇತನ ಸಂಸ್ಥೆ ನಿರ್ವಹಿಸುತ್ತಿರುವ ಕಾರ್ಯವಿಧಾನ ಅಧ್ಯಯನ ಯೋಗ್ಯವಾದುದು.

ದಾನಿಗಳು ತನ್ನಲ್ಲಿರಿಸಿದ ವಿಶ್ವಾಸ, ನಂಬಿಕೆಗಳನ್ನು ಅದಮ್ಯ ಚೇತನ ಸಂಸ್ಥೆಯು ಯಶಸ್ವಿಯಾಗಿ ನಿರ್ವಹಿಸಿದೆ ಎಂಬುದನ್ನು ನಾನೇ ಸ್ವತಃ ನನ್ನ ಸುಮಾರು ಒಂದೂವರೆ ತಿಂಗಳ ಸಹಯೋಗದಲ್ಲಿ ಕಂಡುಕೊಂಡಿದ್ದೇನೆ. ಜೊತೆಗೆ ಸೇವೆಯ ಇಂತಹ ಅಪರೂಪದ ಅವಕಾಶವನ್ನು ಒದಗಿಸಿದ ಸಂಸ್ಥೆಗೆ ನಾನು ಚಿರಋಣಿಯಾಗಿದ್ದೇನೆ.

ಅದಮ್ಯ ಚೇತನ ಚಿರಾಯುವಾಗಲಿ; ಇಂತಹ ನೂರಾರು ಸಂಸ್ಥೆಗಳ ಉದಯವಾಗಲಿ.



**-ಕೆ.ಜನಾರ್ದನ ತುಂಗ**
**ನಿವೃತ್ತ ಬ್ಯಾಂಕ್ ಅಧಿಕಾರಿ**

# ಸೇವೆಯ ಸೌಭಾಗ್ಯ

ಇಷ್ಟೆಲ್ಲ ಕಾರ್ಯ ಆದದ್ದು ಯಾವುದೋ ಕಾರ್ಖಾನೆ ಅಥವಾ ಕಂಪನಿಯಲ್ಲಲ್ಲ. ಅದಮ್ಯ ಚೇತನದ ಅಡುಗೆಮನೆಯಲ್ಲಿ. ಇಲ್ಲಿಗೆ ಬಂದವರು ಯಾವುದೋ ಸಂಬಳಕ್ಕಾಗಿ ಬಂದವರಲ್ಲ. ಫೋಟೋ ಪ್ರಚಾರಕ್ಕಾಗಿ ಬಂದವರಲ್ಲ. ಯಾವುದೋ ಪ್ರಮಾಣಪತ್ರಕ್ಕಾಗಿಯೋ ಅಧಿಕಾರದ ಆಸೆಗೋ ಬಂದವರಲ್ಲ. ಅವರೆಲ್ಲ ಸೇವೆ ಮಾಡಲೆಂದೇ ಬಂದು, ಸಮರ್ಪಣಾಭಾವದಿಂದ ಆ ಕೆಲಸ ಮಾಡಿದರು. ನಮ್ಮ ಹಿರಿಯರು ಹೇಳಿದ ಜೀವನಮಂತ್ರ"ಸರ್ವೇ ಜನಾಃ ಸುಖಿನೋ ಭವಂತು" ಮತ್ತು "ವಸುಧೈವ ಕುಟುಂಬಕಂ" ಇದರ ನಿಜವಾದ ಅನುಷ್ಠಾನವಾಗಿದ್ದು ಈ ಕೆಲಸದಲ್ಲಿ. ಅದಮ್ಯ ಚೇತನದ ಜವಾಬ್ದಾರಿಯನ್ನೂ ಅಲ್ಲಿನ ಕೆಲಸಗಳ ನಿರ್ವಹಣೆಯ ಭಾಗ್ಯವನ್ನೂ ನನಗೆ ಒದಗಿಸಿದವರು ದಿ. ಅನಂತಕುಮಾರ. ಈ ಸೇವಾಕಾರ್ಯದ ಹೊತ್ತಲ್ಲಂತೂ ಇಂಥ ನೂರಾರು ವಿಶೇಷ ವ್ಯಕ್ತಿಗಳೊಂದಿಗೆ ಒಡನಾಡುವ ಅವಕಾಶ ಸಿಕ್ಕಿದ್ದು ನನ್ನ ಸೌಭಾಗ್ಯ ಎಂದು ಭಾವಿಸುತ್ತೇನೆ. ಕೋವಿಡ್ ಸಂಕಷ್ಟದ ಸಮಯದಲ್ಲಿ ದೇಶಾದ್ಯಂತ ವಲಸೆ ಕಾರ್ಮಿಕರು, ಬಡವರು ಹಲವು ಸಮಸ್ಯೆ ಎದುರಿಸಿದರು. ಈ ಹೊತ್ತಲ್ಲಿ ನೂರಾರು ಸಂಘಸಂಸ್ಥೆಗಳು ಸಹಾಯಹಸ್ತ ಚಾಚುವ ಮೂಲಕ ನೊಂದವರ ನೆರವಿಗೆ ಬಂದಿದ್ದು ಭಾರತದ ಅದಮ್ಯ ಚೇತನವೇ ಸರಿ. ಭಾರತದ ಹೃದಯ ಎಂದೂ ನೊಂದವರಿಗಾಗಿ ಮಿಡಿಯುತ್ತದೆ ಎಂಬುದು ಮತ್ತೊಮ್ಮೆ ಸಾಬೀತಾಯಿತು.

**-ತೇಜಸ್ವಿನಿ ಅನಂತಕುಮಾರ್**

## ನಾನು ಕಂಡಂತೆ



## ಅನಂತಕುಮಾರ್



# ಸತ್ಪ್ರೇರಣೆಯ ಅನಂತಛಾಯೆ ಪಸರಿಸಲಿ

**ಜೆ.ಪಿ.ನಡ್ಡಾ** ರಾಷ್ಟ್ರೀಯ ಅಧ್ಯಕ್ಷರು, ಭಾರತೀಯ ಜನತಾ ಪಕ್ಷ

ಶ್ರೀ ಅನಂತಕುಮಾರ್ ಅವರ ಅರವತ್ತನೇ ಹುಟ್ಟುಹಬ್ಬದ ಆಚರಣೆಯ ಸಂದರ್ಭದಲ್ಲಿ ನಡೆಯುತ್ತಿರುವ ಈ ಸಮಾರಂಭದಲ್ಲಿ ನಾನೂ ಪಾಲ್ಗೊಳ್ಳಲು ಸಾಧ್ಯವಾಗುವುದಾದರೆ ತುಂಬ ಸಂತೋಷವಾಗುತ್ತದೆಯೆಂದು ಶ್ರೀಮತಿ ತೇಜಸ್ವಿನಿಯವರು ನನಗೆ ಹೇಳಿದ್ದರು. ಆಗ ನನಗೆ ಸಾಧ್ಯವಾಗುವುದಾದರೆ ಎಂಬ ಮಾತನ್ನು ಹೇಳಬೇಕಾಗಿಯೇ ಇಲ್ಲ, ನಾನು ಬಂದೇ ಬರುತ್ತೇನೆ, ಈ ಕಾರ್ಯಕ್ರಮದಲ್ಲಿ ಅವಶ್ಯವಾಗಿ ಪಾಲ್ಗೊಳ್ಳುತ್ತೇನೆ ಎಂದು ಅವರಿಗೆ ಹೇಳಿದೆ. ಇದಕ್ಕೆ ವಿಶೇಷ ಕಾರಣವೇನೆಂದರೆ, ಅನಂತಕುಮಾರ್ ನನಗಿಂತ ವಯಸ್ಸಿನಲ್ಲಿ ದೊಡ್ಡವರು, ಆದರೆ ನನ್ನನ್ನು ಎಂದೂ ತಮಗಿಂತ ಕಿರಿಯನಂತೆ ಕಾಣಲಿಲ್ಲ, ನನ್ನನ್ನು ತಮ್ಮ ಸ್ನೇಹಿತನಂತೆಯೇ ಕಾಣುತ್ತಿದ್ದರು. ೧೯೮೦ರಲ್ಲಿ ನಾವು ವಿದ್ಯಾರ್ಥಿ ಪರಿಷತ್ತಿನ ಕಾರ್ಯಚಟುವಟಿಕೆಗಳಲ್ಲಿ ತೊಡಗಿದ್ದಾಗ ಶುರುವಾದ ಗೆಳೆತನ ನಮ್ಮದು. ನಾನು ವಿದ್ಯಾರ್ಥಿ ಪರಿಷತ್ತಿನ ಕೆಲಸದಲ್ಲಿ ಭಾಗವಹಿಸುವ ಕಾಲಕ್ಕೆ ಅನಂತಕುಮಾರ್ ಕರ್ನಾಟಕದಲ್ಲಿ ಪರಿಷತ್ತಿನ ಸಂಘಟನಾಕಾರ್ಯದಲ್ಲಿ ತೊಡಗಿಕೊಂಡಿದ್ದರು. ಆಗಿಂದಾಗ್ಗೆ ರಾಷ್ಟ್ರೀಯ ಸಮಿತಿಯ ಬೈಠಕ್ ನಲ್ಲೂ ರಾಷ್ಟ್ರೀಯ ಪರಿಷತ್ತಿನ ಸಭೆಗಳಲ್ಲೂ ನಾವು ಪರಸ್ಪರ ಭೇಟಿಮಾಡುವ ಅವಕಾಶ ಸಿಗುತ್ತಿತ್ತು. ಅವರಲ್ಲಿ ಪರಿಷತ್ತಿನ ಸಂಘಟನೆಗಾಗಿ ಕೆಲಸಮಾಡುವ ಉತ್ಸಾಹ ತುಂಬಿ ತುಳುಕುತ್ತಿತ್ತು, ಸಮಾಜದಲ್ಲಿ ಪರಿವರ್ತನೆಯುಂಟುಮಾಡುವ ಹಂಬಲದ ಹೊಳಹುಗಳು ಕಾಣುತ್ತಿದ್ದವು. ಅಲ್ಲದೆ ದೇಶದ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಗೆ ಕೆಲಸ ಮಾಡಬೇಕೆನ್ನುವುದಕ್ಕೆ ಅವರ ಕೆಲಸ ನಮಗೆ ಪ್ರೇರಣೆ ನೀಡುವಂತಹುದಾಗಿತ್ತು.

ಅನಂತಕುಮಾರ್ ನಮಗೆ ಪ್ರೇರಣೆ ನೀಡುತ್ತಿದ್ದುದು ಮಾತ್ರವಲ್ಲ, ಅವರ ಸಹಚರರಾಗಿ ಅವರ ಜೊತೆಗೆ ಕೆಲಸಮಾಡುವ ಸೌಭಾಗ್ಯವೂ ನನಗೆ ದಕ್ಕಿತು. ಎಲ್ಲೋ ಕೆಲವು ದಿನಗಳೆಂದಲ್ಲ, ೧೯೮೦ ರಿಂದ ೨೦೧೮ರವರೆಗೂ ದೀರ್ಘಕಾಲ ಈ ಸೌಭಾಗ್ಯ ನನಗೆ ಪ್ರಾಪ್ತವಾಯಿತು. ಪರಿಷತ್ತಿನಲ್ಲಿ ಒಟ್ಟಿಗೆ ಕೆಲಸಮಾಡುತ್ತಿದ್ದ ನಾವಿಬ್ಬರೂ ಏಕಕಾಲಕ್ಕೆ ಪೂರ್ಣಾವಧಿ ಕಾರ್ಯಕರ್ತರಾಗಿ ಹೊರಟೆವು, ನಾನು ಯುವಮೋರ್ಚಾದ ಕರ್ತವ್ಯದಲ್ಲಿದ್ದಾಗ ಅನಂತಕುಮಾರ್ ಕರ್ನಾಟಕದಲ್ಲಿ ಬಿಜೆಪಿ ಪಕ್ಷದ ಸಂಘಟನೆಯಲ್ಲಿ ತೊಡಗಿದ್ದರು. ಅವರು ಕೇಂದ್ರಸರ್ಕಾರದ ಮಂತ್ರಿಗಳಾಗಿದ್ದಾಗ ನಾನು ಹಿಮಾಚಲ ಪ್ರದೇಶದಲ್ಲಿ ಅವರಿಗೆ ಜೊತೆಯಾಗಿದ್ದೆ, ೨೦೧೦ರಿಂದ ಮುಂದೆ ೨೦೧೮ರವರೆಗೂ ಪಕ್ಷದ ಕೇಂದ್ರಸಮಿತಿಯಲ್ಲಿ ಪ್ರಧಾನ ಕಾರ್ಯದರ್ಶಿಯಾಗಿಯೂ ಕೇಂದ್ರ ಸರ್ಕಾರದಲ್ಲಿ ಅವರ ಸಹೋದ್ಯೋಗಿಯಾಗಿಯೂ ಅವರೊಡನೆ ಕೆಲಸಮಾಡುವ ಸದವಕಾಶ ನನಗೆ ಲಭಿಸಿತು.

He had the humility. His humbleness is always remembered. His humane attitude was always present, his humor was always present. His homely attitude was always omnipresent. His hard working is one we cannot forget. His honesty we should admire. And the political sense which he had, it should be remembered for he had that political knack . As a strategist in the organization, we always admired him.

ಅನಂತಕುಮಾರ್ ಅವರ ವಿನೀತಭಾವದ ಬಗೆಗೆ ಹೇಳುವುದಾದರೆ ಅವರು ಯಾರೋ ಉನ್ನತಸ್ಥಾನದಲ್ಲಿರುವ ವ್ಯಕ್ತಿ ಎಂದು ನಮಗೆ ಅನ್ನಿಸುತ್ತಲೇ ಇರಲಿಲ್ಲ. ಆತ ನಮ್ಮೊಳಗೇ ಒಬ್ಬ ಎನ್ನುವ ರೀತಿಯಲ್ಲೇ ಅವರು ಯಾವಾಗಲೂ ನಡೆದುಕೊಳ್ಳುತ್ತಿದ್ದರು. ಮಾನವೀಯ ದೃಷ್ಟಿಕೋನದಿಂದ ನೋಡುವುದಾದರೆ ಅನಂತಕುಮಾರ್ ಅವರ ದೃಷ್ಟಿ ಪಕ್ಷದಲ್ಲಾಗಲಿ ಸಮಾಜದಲ್ಲಾಗಲಿ ಎಲ್ಲರಿಗಿಂತ ಕೊನೆಗೆ ನಿಂತಿರುವವರ, ಹಿಂದುಳಿದವರ ಕಡೆಗೇ ಇರುತ್ತಿತ್ತು. ಇನ್ನು ಅವರ ಬಂಧುತ್ವ, ಆತ್ಮೀಯತೆ ಮರೆಯಲಾರದ ಗುಣ. ಸಭೆ ಎಲ್ಲಿ ಸೇರಬೇಕೆಂಬ ಪ್ರಶ್ನೆ ಬಂದಾಗ ನನ್ನ ಉತ್ತರ ಸಿದ್ಧವಾಗಿರುತ್ತಿತ್ತು: ಅನಂತಕುಮಾರರ ಮನೆಯಲ್ಲಿ. ಅವರ ಮನೆಯಲ್ಲಿ ಸತ್ಕಾರ ಸರ್ವದಾ ಸಿದ್ಧವಾಗಿರುತ್ತಿತ್ತು. ರಾತ್ರಿ ಹತ್ತು ಗಂಟೆಯಾಗಲಿ, ಹನ್ನೆರಡಾದರೂ ಸರಿಯೇ. ಊಟಕ್ಕೆ ಬರುವುದೋ ತಿಂಡಿಗೋ ಎಂದು ಅನಂತಕುಮಾರರನ್ನು ಕೇಳುವ ಅಗತ್ಯವೇ ಇರಲಿಲ್ಲ. ಮಧ್ಯಾಹ್ನ ಹನ್ನೆರಡಕ್ಕೆ ಬರಲು ಹೇಳಿದ್ದಾರೆಂದರೆ ಊಟದ ವ್ಯವಸ್ಥೆಯಾಗಿರುತ್ತದೆ ಎಂದು ನಿಶ್ಚಿತ, ಸಂಜೆಯಾದರೆ ಒಳ್ಳೆಯ ಉಪಾಹಾರ, ರಾತ್ರಿಯಾದರೆ ಭೋಜನ ಮುಗಿಸಿಯೇ ನಾವು ಮರಳುವುದು. ನಾವು ಎಂದರೆ ಎಲ್ಲೋ ಕೆಲವರಲ್ಲ, ನಮ್ಮ ಪರಿವಾರದವರು ಯಾರಿರುತ್ತಾರೋ ಅವರಿಗೆಲ್ಲ ಅದೇ ಸತ್ಕಾರ. ಇದು ಅನಂತಕುಮಾರರ ಆತ್ಮೀಯ ಬಂಧುತ್ವದ ರೀತಿ. ಅವರು ಅನಂತ ಮಾತ್ರವಲ್ಲ, ಅನ್ನದಾತರೂ ಆಗಿದ್ದವರು.

ಅನಂತಕುಮಾರ್ ಒಬ್ಬ ಅಪೂರ್ವ ದುಡಿಮೆಗಾರ. ಸಮಯದ ಪರಿವೆಯೇ ಇಲ್ಲದೆ ಸದಾ ಕಾರ್ಯತತ್ಪರರಾಗಿರುತ್ತಿದ್ದವರು. ಪಕ್ಷದ ಸಭೆಗಳು ದಿನವಿಡೀ ನಡೆದ ನಂತರ ಅಲ್ಲಿನ ನಿರ್ಣಯಗಳನ್ನು ಬರೆದಿಡುವ ಮುಖ್ಯ ಕೆಲಸವಾಗಬೇಕಲ್ಲ, ದಿನದ ಪರಿಶ್ರಮದಿಂದ ರಾತ್ರಿ ಹತ್ತುಗಂಟೆಯ ಹೊತ್ತಿಗೆ ನಿದ್ರೆ ತುಂಬಿ ಕಣ್ಣುಜೋಲುವ ಹೊತ್ತಿಗೆ ಅನಂತಕುಮಾರ್ ಹಾಜರು. ನಮ್ಮನ್ನೂ ಸುಮ್ಮನೆ ಬಿಡುವವರಲ್ಲ. ನಡ್ಡಾರವರೇ, ಈ ನಿರ್ಣಯಗಳನ್ನು ಬರೆದಿಡುವ ಕೆಲಸ ಈ ಹೊತ್ತೇ ಆಗಬೇಕು. ನಾಳೆ ಬೆಳಗ್ಗೆ ಇವನ್ನು ತಲುಪಿಸಲೇ ಬೇಕು ಎನ್ನುತ್ತಾ ಬರೆಯಲು ಕುಳಿತರೆ ರಾತ್ರಿ ಒಂದಾದರೂ ಸರಿಯೇ. ಎರಡಾದರೂ ಸರಿಯೇ. ಬರೆದು, ಬರೆದುದನ್ನು ಪರಿಶೀಲಿಸಿ ಮತ್ತೆ ಬರೆದು ಎಲ್ಲ ಸಮಂಜಸವಾಗಿದೆ ಎಂದು ದೃಢಪಟ್ಟಮೇಲೆಯೇ ವಿಶ್ರಾಂತಿಯ ಯೋಚನೆ. ಕೆಲಸದಲ್ಲೂ ಅಷ್ಟೇ. ಇಂಥ ಸಮಯವೆಂಬುದೇ ಇಲ್ಲ. ಎಷ್ಟು ಹೊತ್ತಾದರೂ ಸರಿಯೇ, ಮಾಡಹೊರಟ ಕೆಲಸವನ್ನು ಮುಗಿಸಿಯೇ ಸಿದ್ಧ.

ಕೇಂದ್ರಸರ್ಕಾರದ ಒಬ್ಬ ಮಂತ್ರಿಯಾಗಿ ಅನಂತಕುಮಾರರ ಸಾಧನೆ, ಕೊಡುಗೆ ಅಪಾರವಾಗಿದೆ. He was innovative, he was risk-taking, He used to take new challenges.ಅವರ ಆಲೋಚನೆಗಳು ನವನವೀನವಾಗಿರುತ್ತಿದ್ದುವು. ತಮ್ಮ ಆಲೋಚನೆಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಅವರು ಯಾವುದೇ ಸವಾಲನ್ನು ಎದುರಿಸಲು ಸನ್ನದ್ಧರಾಗಿರುತ್ತಿದ್ದರು, ಕಾರ್ಯಸಿದ್ಧತೆಯಲ್ಲಿ ಒದಗಬಹುದಾದ ಅಡ್ಡಿ ಆತಂಕಗಳನ್ನು ಅವರು ಯಶಸ್ವಿಯಾಗಿ ನಿವಾರಿಸಬಲ್ಲವರಾಗಿದ್ದರು. ಅವರು ನಾಗರಿಕ ವಿಮಾನಯಾನ ಖಾತೆಯ ಸಚಿವರಾಗಿದ್ದ ಸಂದರ್ಭ. ಆ ಕಾಲಕ್ಕೆ ಸಾರ್ವಜನಿಕ ಕಾಮಗಾರಿಗಳಿಗೆ ಖಾಸಗಿ ಭಾಗಿತ್ವವನ್ನು ಆಹ್ವಾನಿಸುವುದೆಂದರೆ ಒಂದು ಹಿನ್ನಡೆಯ ಹೆಜ್ಜೆಯೆಂದೇ ಭಾವಿಸಲಾಗುತ್ತಿತ್ತು..


ಸರ್ಕಾರ ಆಪತ್ತನ್ನು ಮೈಮೇಲೆ ಎಳೆದುಕೊಂಡಂತೆಯೇ ಲೆಕ್ಕ. ಖಾಸಗೀಕರಣದ ಮಾತೆತ್ತುವುದೇ ಮಹಾಪಾಪವೆಂದು ಪರಿಗಣಿಸಲಾಗುತ್ತಿದ್ದ ಕಾಲದಲ್ಲಿ ಅನಂತಕುಮಾರ್ ವಿಮಾನಯಾನದಲ್ಲಿ ಮಾತ್ರವಲ್ಲ, ವಿಮಾನನಿಲ್ದಾಣಗಳ ನಿರ್ವಹಣೆಯಲ್ಲೂ ಸರ್ಕಾರದೊಡನೆ ಖಾಸಗಿ ಸಹಭಾಗಿತ್ವವನ್ನು ಆಹ್ವಾನಿಸಲು ಮುಂದಾದರು. ಅನಂತಕುಮಾರ್ ರೂಪಿಸಿದ ಈ ಪ್ರಯೋಗವನ್ನು ವಾಜಪೇಯಿ ಸರ್ಕಾರ ಯಶಸ್ವಿಯಾಗಿ ಜಾರಿಗೊಳಿಸಿತು.

ಕೋಟ್ಯಂತರ ಭಾರತೀಯರ ಆರೋಗ್ಯಕ್ಕೆ ನೆರವಾಗುವ ಮಹತ್ವಪೂರ್ಣ ಕೊಡುಗೆ ಕೊಟ್ಟವರು ಅನಂತಕುಮಾರ್. ನಾನು ಸ್ವಾಸ್ಥ್ಯ ಖಾತೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದೆ. ಅವರು ಔಷಧಖಾತೆಯನ್ನು ನೋಡಿಕೊಳ್ಳುತ್ತಿದ್ದರು. ಔಷಧ ತಯಾರಿಕೆ ನಮ್ಮ ಹೊಣೆಯಾದರೆ ಅವುಗಳಿಗೆ ಬೆಲೆ ನಿಗದಿ ಪಡಿಸುವ ಕೆಲಸ ಔಷಧಮಂತ್ರಾಲಯಕ್ಕೆ ಸಂಬಂಧಿಸಿದ್ದು. ಅನಂತಕುಮಾರರೊಡನೆ ಕೆಲಸ ಮಾಡುವುದೆಂದರೆ ಅದೊಂದು ಆನಂದದಾಯಕ ಅನುಭವ. ಸಾವಿರಾರು ರೂಪಾಯಿ ಬೆಲೆಬಾಳುವ ಜೀವರಕ್ಷಕ ಔಷಧಗಳನ್ನು ಜನೌಷಧಿಯ ಹೆಸರಿನಲ್ಲಿ ಅವರು ನೂರಿನ್ನೂರು ರೂಪಾಯಿಗಳಿಗೆ ಲಭ್ಯವಾಗುವಂತೆ ಮಾಡಿದರು. ಅತ್ಯಗತ್ಯ ಔಷಧಗಳನ್ನು ಯಾವುದೇ ಯೋಚನೆಯಿಲ್ಲದೆ ರಾಷ್ಟ್ರೀಯ ಪಟ್ಟಿಯಲ್ಲಿ ಸೇರಿಸುವಂತೆ ನನಗೆ ಸಲಹೆಮಾಡುತ್ತಿದ್ದ ಅನಂತಕುಮಾರ್ ಅವುಗಳು ಕಡಿಮೆಬೆಲೆಗೆ ಲಭ್ಯವಾಗುವಂತೆ ಮಾಡುವುದು ತನ್ನ ಜವಾಬ್ದಾರಿ ಎನ್ನುತ್ತಿದ್ದರು. ಹೀಗಾಗಿ ಹೃದ್ರೋಗಿಗಳು ಎರಡುಲಕ್ಷ ರೂಪಾಯಿ ತೆರಬೇಕಾಗಿದ್ದ ಸ್ಟೆಂಟ್ ಇಪ್ಪತ್ತು ಮೂವತ್ತು ಸಾವಿರ ರೂಪಾಯಿಗಳಲ್ಲಿ ದೊರಕುವಂತಾಯಿತು. ಮಂಡಿಕೀಲಿನ ಶಸ್ತ್ರಚಿಕಿತ್ಸೆಯೂ ಸುಲಭಬೆಲೆಯಲ್ಲಿ ಸಾಧ್ಯವಾಗುವಂತಾಯಿತು.

ನನಗೆ ಅತಿ ದುಃಖವಾಗುವ ವಿಷಯವೇನೆಂದರೆ, ನಾನು ಆರೋಗ್ಯಖಾತೆಯ ಮಂತ್ರಿಯಾಗಿದ್ದರೂ ಅನಂತಕುಮಾರರ ಅನಾರೋಗ್ಯದ ಸುಳಿವೂ ನನಗೆ ಗೊತ್ತಾಗದೆ ಹೋದುದು. ಅತಿ ಗಂಭೀರವಾದ ಖಾಯಿಲೆಗೆ ತುತ್ತಾಗಿ ಅವರು ನಮ್ಮನ್ನು ಅಗಲಿಹೋದರು. ನಾನು ಅವರ ಆರೋಗ್ಯದ ಬಗೆಗೆ ಹಲವಾರು ಬಾರಿ ವಿಚಾರಿಸಿಯೂ ಇದ್ದೆ. ಆಗೆಲ್ಲ ಅವರು ಏನಿಲ್ಲ, ನಾನು ಚೆನ್ನಾಗಿಯೇ ಇದ್ದೇನೆ. No problem brother. I am fighting fit ಎಂದುಬಿಡುತ್ತಿದ್ದರು. ನಮ್ಮಿಂದ ತಮ್ಮ ನೋವನ್ನು ಅಡಗಿಸಿಟ್ಟು ಅವರು ದೂರವಾಗಿಬಿಟ್ಟರು.

ಆದರೆ ಅವರ ನೆನಪು ನಮ್ಮಲ್ಲಿ ಸದಾ ಹಸಿರಾಗಿರುತ್ತದೆ. An ideal worker, an ideal leader and an organizer par excellence, and a strategist. This was Ananthkumar. He was philosophical also. ಅವರ ಕಾರ್ಯಕ್ಕೆ ಒದಗುತ್ತಿದ್ದ ಪ್ರೇರಣೆ ತತ್ವಜ್ಞಾನಪೂರ್ವಕವಾಗಿರುತ್ತಿತ್ತು.. This does not come so long if you do not have a philosophical incline. It comes only when you have a philosophical incline. ಎಲ್ಲರನ್ನೂ ಜೊತೆಜೊತೆಗೇ ಮುಂದಕ್ಕೊಯ್ಯಬೇಕು. ಇದು ಅನಂತಕುಮಾರರ ಧ್ಯೇಯ. ಆಗಿಂದಾಗ್ಗೆ ಸಭಾಕಲಾಪಗಳು ಜರುಗುತ್ತಿದ್ದವು. ಸಭೆಯ ನಿರ್ಣಯಗಳಿಂದ ಎಲ್ಲರಿಗೂ ಸಂತೋಷವಾಗುವುದು ಸಾಧ್ಯವಂತೂ ಇಲ್ಲ. ಕೆಲವರು ಸಂತುಷ್ಟರಾದರೆ ಬೇಸರಗೊಳ್ಳುವವರು ಹಲವರು. ಸಂತೃಪ್ತರಾದವರನ್ನು ಅಷ್ಟಕ್ಕೆ ಬಿಟ್ಟು ಅನಂತಕುಮಾರ್ ಬೇಸರದಲ್ಲಿರುವವರನ್ನು ಸಂತೈಸಲು ಮುಂದಾಗುತ್ತಿದ್ದರು. He had a healing touch. ಯಾವುದೇ ಅಶಾಂತ ಮನಸ್ಸನ್ನು ಸಾಂತ್ವನಗೊಳಿಸುವ ಶಕ್ತಿ ಅವರಲ್ಲಿತ್ತು.

ನಮಗ್ಯಾರಿಗೂ ಅನಂತಕುಮಾರ್ ನಮ್ಮನ್ನು ಇಷ್ಟುಬೇಗ ತೊರೆದು ಹೋಗುತ್ತಾರೆಂಬುದರ ಕಲ್ಪನೆಯೂ ಇರಲಿಲ್ಲ. ಆದರೆ ಅವರಿಂದ ನಮಗೆ ಸದಾ ಪ್ರೇರಣೆಯೊದಗುತ್ತಿರುವುದರಲ್ಲಿ ಸಂಶಯವಿಲ್ಲ. You should not speak, your work should speak. ಅನಂತಕುಮಾರರಿಂದಷ್ಟೇ ಅಲ್ಲ, ಪೂಜನೀಯರಾದ ಅತ್ತಿಗೆ ತೇಜಸ್ವಿನಿ ಅನಂತಕುಮಾರರಿ0ದಲೂ ನಮಗೆ ಸತ್ಪ್ರೇರಣೆ ದೊರಕುತ್ತದೆ. ಅವರು ಒಂದು ಆದರ್ಶ ಕುಟುಂಬದ ನಿದರ್ಶನವನ್ನು ಸಮಾಜಕ್ಕೆ ತೋರಿಸಿಕೊಟ್ಟಿದ್ದಾರೆ. ರಾಜನೀತಿಯಂತೆಯೇ ಸಮಾಜಸೇವೆಯೂ ಅದೂ ಸುದೀರ್ಘವಾಗಿ ಹೇಗೆ ಸಾಧ್ಯವಾಗುವುದೆಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ.







ಅನಂತಕುಮಾರ್ ಅವರ ಆತ್ಮಕ್ಕೆ ಶಾಂತಿ ಲಭಿಸಲಿ, ಅವರ ಪ್ರೇರಣೆ ನಮಗೆ ಸದಾ ಲಭ್ಯವಾಗಲಿ ಎಂದು ನಾನು ಭಗವಂತನಲ್ಲಿ ಪ್ರಾರ್ಥನೆ ಸಲ್ಲಿಸುತ್ತೇನೆ. ಪಕ್ಷಕ್ಕೆ ಅವರು ಸಲ್ಲಿಸಿರುವ ಸೇವೆ ಮರೆಯುವಂತಹುದಲ್ಲ. ಪಕ್ಷದ ಕಾರ್ಯಕರ್ತರಾಗಿ, ಚುನಾವಣಾ ಸಮಿತಿಯ ಸದಸ್ಯರಾಗಿ, ಪಾರ್ಲಿಮೆಂಟರಿ ಸಮಿತಿಯ ಸದಸ್ಯರಾಗಿ. ಕಾರ್ಯದರ್ಶಿಯಾಗಿ, ಅತ್ಯುಚ್ಚ ನಿರ್ಣಾಯಕ ಸಮಿತಿಯ ಕಾರ್ಯದರ್ಶಿಯಾಗಿ ಅನಂತಕುಮಾರ್ ಸಲ್ಲಿಸಿದ ಸೇವೆ ಸ್ಮರಣಾರ್ಹ. ಇದೇ ಸಂದರ್ಭದಲ್ಲಿ ನಾನು ಅತ್ತಿಗೆ ಶ್ರೀಮತಿ ತೇಜಸ್ವಿನಿ ಅನಂತಕುಮಾರರನ್ನೂ ಅಭಿನಂದಿಸಬಯಸುತ್ತೇನೆ. ತಮಗೆ ಅನಂತಕುಮಾರರು ನೀಡಿದ ಪ್ರೇರಣೆಯ ಮೂಲಕ ಯಾವ ದಾರಿಯಲ್ಲಿ ತೇಜಸ್ವಿನಿಯವರು ಮುನ್ನಡೆಯುತ್ತಿರುವರೋ ಅವರ ಮುಂದಿನ ಯೋಜನೆಯಲ್ಲಿ ನಾವೂ, ನಮ್ಮ ಪಕ್ಷವೂ ಸದಾ ಸಹಯೋಗ ನೀಡಲು ಸಿದ್ಧರಾಗಿರುತ್ತೇವೆಂದು ಈ ಮೂಲಕ ಭರವಸೆ ನೀಡಲಿಚ್ಚಿಸುತ್ತೇನೆ. ಅನಂತಕುಮಾರ್ ಪ್ರತಿಷ್ಠಾನದ ಮೂಲಕ ಅನಂತಕುಮಾರರ ಕನಸುಗಳನ್ನು ಸಾಕಾರಗೊಳಿಸುವ ಅವರ ಯೋಜನೆಯಲ್ಲಿ ನಾವೆಲ್ಲರೂ ಜೊತೆಗೂಡೋಣ.

A personality is known by the long shadow he leaves. And this trust is a trust and an indication of how long Ananthkumar's shadow lives with us.

ಪ್ರತಿಷ್ಠಾನದ ಕೆಲಸದ ಮೂಲಕ ಅನಂತಕುಮಾರರ ಛಾಯೆ ವಿಶಾಲವಾಗಿ ಪಸರಿಸುವಂತಾಗಲಿ ಎಂದು ಆಶಿಸುತ್ತೇನೆ.

ಪುಟ-5 ರಿಂದ

ಹೇಗೆ ರಾಜಕಾರಣವು ಒಂದು ಸಾಮಾಜಿಕ ವ್ಯವಸ್ಥೆಗೆ ಜೋಡಣೆ ಆಗುವಂಥ ರೀತಿಯಲ್ಲಿ ಮುಂದೆ ಹೋಗಬೇಕೋ ಅದಕ್ಕೆ ಬೇಕಾದಂಥ ಮೂಲ ಸ್ವತ್ತುಗಳ ಕೊರತೆ ಇವತ್ತು ಇದೆ. ಯಾರೋ ಹಿರಿಯರು ಭಾಷಣ ಮಾಡಿದ್ದನ್ನು ನಾನು ಕೇಳಿದ್ದೇನೆ. ಯಾವಾಗಲೂ ಆಡಳಿತದಲ್ಲಿ ವೃತ್ತಿಪರತೆ ಮತ್ತು ಕ್ರಿಯಾಶೀಲತೆ ಇರಲೇಬೇಕು. ಸಾಧಾರಣವಾಗಿ ವೃತ್ತಿಪರತೆ ಇದ್ದರೂ ಕ್ರಿಯಾಶೀಲತೆ ಇರೋಲ್ಲ. ಜಾಸ್ತಿ ಕ್ರಿಯಾಶೀಲತೆ ಇದ್ದರೂ ವೃತ್ತಿಪರತೆ ಮರೆತುಹೋಗುತ್ತದೆ. ಅಂತಃಕರಣ ಮತ್ತು ದೂರದರ್ಶಿತ್ವ ಇವೆರಡೂ ಇಲ್ಲದಂಥ ಆಡಳಿತ ಮಾಡಲು ಹೊರಟರೆ ಯಾವುದೇ ವ್ಯಕ್ತಿ ಸಫಲ ಆಗಲಿಕ್ಕೆ ಸಾಧ್ಯವೇ ಇಲ್ಲ. ನೈತಿಕತೆ ಮತ್ತು ಶಿಸ್ತಿಲ್ಲದ ಆಡಳಿತ ಅದು ಯಾವುದೇ ವ್ಯಕ್ತಿಯನ್ನು ಅಧಃಪತನಕ್ಕೆ ತಲುಪಿಸುವುದೇ ಹೊರತು ಅವನನ್ನು ಒಳ್ಳೆಯವನನ್ನಾಗಿ ಮಾಡಲಾರದು. ಪ್ರಾಯಶ: ಈ ನಾಲ್ಕು ಸೂತ್ರಗಳನ್ನ ಯಾರಿಗೂ ಭಾರೀ ದೊಡ್ಡ ರೀತಿಯಲ್ಲಿ ಅಳವಡಿಸಲಿಕ್ಕೆ ಆಗಲಿಲ್ಲ. ನರೇಂದ್ರ ಮೋದಿಯವರು ಪ್ರಾಯಶ: ಈ ಎಲ್ಲ ಸೂತ್ರಗಳನ್ನು ಅಳವಡಿಸಿಕೊಂಡಿದ್ದಾರೆ ಎಂದು ನಾನು ಭಾವಿಸಿದ್ದೇನೆ. ಈ ನಾಲ್ಕು ಸೂತ್ರಗಳನ್ನು ಅಳವಡಿಸಿಕೊಳ್ಳಲಿಕ್ಕೆ ಬೇಕಾದಂಥ ಕೆಲಸ ಕಾರ್ಯಗಳನ್ನು ಒಂದು ಪ್ರತಿಷ್ಠಾನದ ಮುಖಾಂತರ ಮಾಡುವಂಥ ಯೋಜನೆಯನ್ನು ನಮ್ಮ ತೇಜಸ್ವಿನಿ ಅನಂತಕುಮಾರ್ ಮತ್ತು ಅವರ ಸಹಪಾಠಿಗಳು ಮಾಡುತ್ತ ಇರುವಂಥದ್ದು ತುಂಬ ಸಂತೋಷ ತಂದಿದೆ. ಇದಕ್ಕೆ ನನ್ನ ಪೂರ್ತಿ ಸಹಮತ ಇದೆ.

ಅನಂತಕುಮಾರ್ ಅವರು ಇವತ್ತು ನಮ್ಮ ಜೊತೆಗೆ ಇಲ್ಲ. ಆದರೆ ಅವರ ವಿಚಾರಗಳು ನಮ್ಮ ಜೊತೆ ಇವೆ. ನನ್ನ ಇಲಾಖೆಯಲ್ಲಂತೂ ಆ ಬೇವು ಲೇಪನದ ಒಂದು ಯೂರಿಯಾ ಕೊಟ್ಟದ್ದು ಇರಬಹುದು, ಜನರಿಕ್ ಔಷಧಗಳಿಗೆ ಹೊಸ ದಿಕ್ಕು ಕೊಟ್ಟು ಜನ ಸಾಮಾನ್ಯರಿಗೆ ತಲುಪಿಸುವ ಕೆಲಸ ಆಗಿರಬಹುದು, ಇಂಥ ಹಲವು ಅದ್ಭುತ ಕೆಲಸ ಕಾರ್ಯಗಳನ್ನು ಅವರು ಮಾಡಿದ್ದಾರೆ. ಅವರ ಹೆಸರು ಈ ದೇಶದ ಯಾವುದೇ ಭಾಗದಲ್ಲೂ ಅಜರಾಮರವಾಗಿ ಇರಬೇಕು. ನನ್ನ ಇಲಾಖೆಯಲ್ಲೂ ಅಜರಾಮರವಾಗಿ ಇರಬೇಕು. ಈಗಾಗಲೇ ನಾನು ಒಂದು ಪ್ರಪೋಸಲ್ ಮಾಡಿದ್ದೇನೆ ಬೆಂಗಳೂರಿನಲ್ಲಿ ಒಂದು ದೊಡ್ಡ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಸೆಂಟರ್ ಆಗುತ್ತಲಿದೆ. ಅದಕ್ಕೆ ಸನ್ಮಾನ್ಯ ಅನಂತಕುಮಾರ್ ಹೆಸರನ್ನು ಅದಕ್ಕೆ ಇಟ್ಟು ಅನಂತಕುಮಾರ್ ಹೆಸರು ಚಿರಸ್ಥಾಯಿಯಾಗಬೇಕು ಆ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಸೆಂಟರ್ ಅನಂತಕುಮಾರ್ ಅವರ ಹೆಸರಿನಲ್ಲಿ ಇರಬೇಕು ಎಂದು ಭಾವಿಸಿ ಈಗಾಗಲೇ ಪ್ರಸ್ತಾವನೆಯನ್ನು ಸಲ್ಲಿಸಿದ್ದೇನೆ. ಇದೆಲ್ಲವೂ ಕೂಡ ಒಬ್ಬ ವ್ಯಕ್ತಿ ಸಮಾಜಕ್ಕೆ ಶಕ್ತಿಯಾಗಿ ಕಲ್ಪಿಸಿರುವ ವ್ಯವಸ್ಥೆಗೆ ಪ್ರತಿಯಾಗಿ ನಾವು ಸಲ್ಲಿಸಬೇಕಾದಂಥ ಗೌರವ ಎಂದು ನಾನು ಭಾವಿಸುತ್ತೇನೆ. ಧನ್ಯವಾದಗಳು.

(ಬೆಂಗಳೂರಿನಲ್ಲಿ ಜರುಗಿದ ಅನಂತಕುಮಾರ್ ಪ್ರತಿಷ್ಠಾನದ ಪ್ರಾರಂಭೋತ್ಸವದಲ್ಲಿ ಮಾಡಿದ ಭಾಷಣದಿಂದ ಆಯ್ದ ಭಾಗಗಳು)

# ಹಸಿರು ಭಾನುವಾರ






Tree planting with doctors at AnanthaVana



Tree planting program at ISEC - environment day



Tree planting at Bangalore University





## ಅನಂತಪಥ

Text – Compilation
**Gopal T.S**

Layout –
**Madhushree B.A**

Inputs –
**H N A Prasad**
**Poornaprajna**

**Photographs –**
©Ananthkumar Prathishtnana
©Adamya Chetana - foundation

Published by –
**Smt. Tejaswini AnanthKumar**
For – AnanthKumar Pratishthana
# 12, Sumeru,
M N Krishna Rao Road,
Basavanagudi, Bangalore – 04
Ph – 08026568484
Email- ananth.path@akp.org.in